# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಡಿಸೆಂಬರ್ 10, 2020

ಸಂಪುಟ : 47 ಸಂಚಿಕೆ : 220 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಮುಂದಿನ ವರ್ಷ ಪಶು ಸಂಜೀವಿನಿ ಜಾರಿ

ಬೆಂಗಳೂರು, ಡಿ.9 - ಗ್ರಾಮೀಣ ಪ್ರದೇಶದಲ್ಲಿ ಹಸು, ಕರುಗಳಿಗೆ ಚಿಕಿತ್ಸೆ ಒದಗಿಸಲು ಪಶು ಸಂಜೀವಿನಿ ಯೋಜನೆಯನ್ನು ಮುಂದಿನ ವರ್ಷದ ಆರಂಭದಲ್ಲೇ ಜಾರಿಗೆ ತರಲಾಗುವುದು ಎಂದು ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್ ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಡಾ. ಅನ್ನದಾನಿ, ಜಿ.ಟಿ.ದೇವೇಗೌಡ, ವೆಂಕಟರಾವ್ ನಾಡಗೌಡ ಸೇರಿದಂತೆ ಹಲವು ಸದಸ್ಯರು ಮಾಡಿದ ಪ್ರಸ್ತಾಪಕ್ಕೆ (2ನೇ ಪುಟಕ್ಕೆ)

## ಗ್ರಾಮೀಣ ಸಾರಿಗೆಗೆ 4 ಸಾವಿರ ಬಸ್ ಖರೀದಿ

ಬೆಂಗಳೂರು, ಡಿ. 9 - ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಸಾರಿಗೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಹೊಸದಾಗಿ ನಾಲ್ಕು ಸಾವಿರ ಬಸ್ ಖರೀದಿಸುತ್ತಿರುವುದಾಗಿ ಸಾರಿಗೆ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಲಿಂಗೇಶ್ ಕುಮಾರ್, ಜಿ.ಟಿ. ದೇವೇಗೌಡ, ಹರ್ಷವರ್ಧನ್ ಅವರು ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಉಪಮುಖ್ಯಮಂತ್ರಿಗಳು, ಕಳೆದ ಮುಂಗಡ ಪತ್ರದಲ್ಲೇ 4 ಸಾರಿಗೆ ಸಂಸ್ಥೆಗಳಿಗೂ ಈ ಪ್ರಮಾಣದ ಬಸ್ (2ನೇ ಪುಟಕ್ಕೆ)

# ಗೋಹತ್ಯೆ ತಡೆ ಮಸೂದೆಗೆ ಅಂಗೀಕಾರ

## ಗದ್ದಲದ ನಡುವೆಯೂ ಚರ್ಚೆ ನಡೆಸದೇ ಎಮ್ಮೆಗಳನ್ನೂ ರಕ್ಷಿಸುವ ಮಸೂದೆಗೆ ಒಪ್ಪಿಗೆ

ಬೆಂಗಳೂರು, ಡಿ. 9 - ಗದ್ದಲದ ನಡುವೆ ಗೋಹತ್ಯೆ ತಡೆ ಮಸೂದೆಗೆ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಅಂಗೀಕಾರ ಪಡೆದುಕೊಂಡಿದೆ. ಈ ಮಸೂದೆಯ ಮೂಲಕ ಗೋಹತ್ಯೆಯನ್ನು ರಾಜ್ಯದಲ್ಲಿ ಸಂಪೂರ್ಣ ನಿರ್ಬಂಧಿಸಲು ಸರ್ಕಾರ ಉದ್ದೇಶಿಸಿದೆ.

ಗೋಹತ್ಯೆ ತಡೆ ಮಸೂದೆಯ ಅನ್ವಯ , ಗೋವುಗಳ ಹತ್ಯೆ, ಕಳ್ಳಸಾಗಣೆ, ದುರಾಚಾರ ಹಾಗೂ ಹತ್ಯೆ ನಡೆಸುವವರನ್ನು ಕಠಿಣವಾಗಿ ಶಿಕ್ಷಿಸಲಾಗುವುದು.

ಮಸೂದೆ ಮಂಡನೆಯನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿತ್ತು. ವಿರೋಧದ ನಡುವೆಯೇ ಮಸೂದೆಯನ್ನು ಮಂಡಿಸಿದಾಗ, ಅದನ್ನು ವಿರೋಧಿಸಿ ಕಾಂಗ್ರೆಸ್ ಸಭಾತ್ಯಾಗ ಮಾಡಿದ್ದರ ನಡುವೆ ಅಂಗೀಕಾರ ಪಡೆದುಕೊಳ್ಳಲಾಗಿದೆ.

ಗೋವುಗಳು ಹಾಗೂ ಕರುಗಳಷ್ಟೇ ಅಲ್ಲದೇ, ಎಮ್ಮೆಗಳು ಹಾಗೂ ಅದರ ಕರುಗಳನ್ನು 12 ವರ್ಷಗಳವರೆಗೆ ರಕ್ಷಿಸಲೂ ಸಹ ಮಸೂದೆ ಉದ್ದೇಶಿಸಿದೆ.

ಗೋಹತ್ಯೆ ಕಾಯ್ದೆ ಉಲ್ಲಂಘಿಸುವವರ ವಿರುದ್ಧ ದಾಖಲಾಗುವ ಪ್ರಕರಣಗಳ ತನಿಖೆಗಾಗಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಮಸೂದೆ ಉದ್ದೇಶಿಸಿದೆ. ಅಲ್ಲದೇ. ಗೋವುಗಳ ರಕ್ಷಣೆಗಾಗಿ ಗೋಶಾಲೆಗಳ ಸ್ಥಾಪನೆಗೂ ಅವಕಾಶ ಇರಲಿದೆ. ಪೊಲೀಸರು ಗೋಹತ್ಯೆ ತಡೆಗಾಗಿ ಪರಿಶೀಲನೆ ನಡೆಸಲು ಅವಕಾಶ ನೀಡಲಾಗುವುದು.



ಗೋವುಗಳನ್ನು ರಕ್ಷಿಸುವವರಿಗೆ ರಕ್ಷಣೆ ನೀಡಲೂ ಸಹ ಈ ಕಾಯ್ದೆ ಉದ್ದೇಶಿಸಿದೆ. ಮಸೂದೆ ಮಂಡನೆಯನ್ನು ಕಾಂಗ್ರೆಸ್ ವಿರೋಧಿಸಿ ಗದ್ದಲ ನಡೆಸಿತು. ಹೀಗಾಗಿ ಚರ್ಚೆ ಸಾಧ್ಯವಾಗದೇ ಗದ್ದಲದ ನಡುವೆಯೇ ಮಸೂದೆಗೆ ಅಂಗೀಕಾರ ಪಡೆಯಲಾಗಿದೆ. ಈ

- ಗೋವುಗಳ ಹತ್ಯೆ, ಕಳ್ಳಸಾಗಣೆ ನಡೆಸುವವರಿಗೆ ಕಠಿಣ ಶಿಕ್ಷೆ
- ಪ್ರಕರಣಗಳ ತನಿಖೆಗಾಗಿ ವಿಶೇಷ ನ್ಯಾಯಾಲಯ ಸ್ಥಾಪನೆ
- ಗೋಶಾಲೆ ಸ್ಥಾಪನೆಗೂ ಅವಕಾಶ
- ಗೋವುಗಳ ರಕ್ಷಕರಿಗೂ ರಕ್ಷಣೆ

ಕ್ರಮವನ್ನು ವಿರೋಧಿಸಿದ ಕಾಂಗ್ರೆಸ್ ಸಭಾತ್ಯಾಗ ಮಾಡಿತು.

ಪಶು ಸಂಗೋಪನಾ ಸಚಿವ ಪ್ರಭು ಚೌಹಾಣ್ ಅವರು ಮಸೂದೆಯನ್ನು ಮಂಡಿಸಿದರು. ಆಗ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು ಸದನದ ಬಾವಿಗೆ ನುಗ್ಗಿ ಪ್ರತಿಭಟಿಸಿದರು.

ಸದನ ವ್ಯವಹಾರಗಳ ಸಮಿತಿಯಲ್ಲಿ ಮಸೂದೆಯ ಕುರಿತು ಚರ್ಚಿಸಿಲ್ಲ. ನಿನ್ನೆ ನಡೆದ ಸಭೆಯಲ್ಲಿ ಹೊಸ ಮಸೂದೆಗಳನ್ನು ಮಂಡಿಸಬಾರದು ಎಂಬ ನಿರ್ಧಾರ (2ನೇ ಪುಟಕ್ಕೆ)

## ಶುದ್ಧ ನೀರಿನ ಘಟಕಗಳಲ್ಲಿ ಭ್ರಷ್ಟಾಚಾರ ಜಂಟಿ ಸದನ ಸಮಿತಿ ತನಿಖೆ: ಸಿಎಂ

ಬೆಂಗಳೂರು, ಡಿ.9 - ಶುದ್ಧ ಕುಡಿಯುವ ನೀರಿನ ಘಟಕದಲ್ಲಿ ನಡೆದಿರುವ ಭಾರೀ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಜಂಟಿ ಸದನ ಸಮಿತಿ ಮೂಲಕ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಧಾನಸಭೆಯಲ್ಲಿ ಘೋಷಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ವೆಂಕಟರಾವ್ ನಾಡಗೌಡ, ಬಸನಗೌಡ ಪಾಟೀಲ್ ಯತ್ನಾಳ್, ಸಿದ್ದು ಸವದಿ ಸೇರಿದಂತೆ ಕೆಲವರು ಪಕ್ಷಭೇದ ಮರೆತು ಮಾಡಿದ ಆರೋಪದ ಹಿನ್ನೆಲೆಯಲ್ಲಿ ಮಧ್ಯೆ ಪ್ರವೇಶ ಮಾಡಿದ ಮುಖ್ಯಮಂತ್ರಿ ಅವರು, ಇದರಲ್ಲಿ ಭಾರೀ ಅವ್ಯವಹಾರ ನಡೆದಿರುವುದು ನನ್ನ ಗಮನಕ್ಕೂ ಬಂದಿದೆ. ಆದ್ದರಿಂದ ಸದನ ಸಮಿತಿ ಮೂಲಕವೇ ತನಿಖೆ ನಡೆಸಿ ಮುಂದಿನ ಅಧಿವೇಶನದಲ್ಲಿ ವರದಿ ಮಂಡಿಸುವುದಾಗಿ ಪ್ರಕಟಿಸಿದರು. ಪಂಚಾಯತ್



ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಉತ್ತರ ನೀಡಲು ಅವಕಾಶ ನೀಡದ ಮುಖ್ಯಮಂತ್ರಿ ಅವರು, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಾನೇ ಪರಿಶೀಲನೆ ಮಾಡಿದ್ದೇನೆ. ಇಂಥ ಘಟಕಗಳನ್ನು ಏಕಾದರೂ ಸ್ಥಾಪಿಸಿದ್ದಾರೋ ತಿಳಿಯದು.

ಇದರಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿದೆ. ತಪ್ಪಿತಸ್ಥರಿಗೆ ಶಿಕ್ಷೆ ಆಗಲೇಬೇಕು. (3ನೇ ಪುಟಕ್ಕೆ)



**ಲಸಿಕೆ** ದಾವಣಗೆರೆಯ ಭಗತ್ ಸಿಂಗ್ ನಗರ ಕೆಎಸ್ಆರ್ಟಿಸಿ ಬಸ್ ನಿಲ್ದಾಣದ ಹಿಂಭಾಗದ ರಸ್ತೆಯಲ್ಲಿರುವ ಚೌಡೇಶ್ವರಿ ದೇವಸ್ಥಾನದಲ್ಲಿ ಬುಧವಾರ ಮಕ್ಕಳಿಗೆ ರೋಗ ನಿರೋಧಕ ಲಸಿಕೆ ನೀಡಲಾಯಿತು.

## ಕೃಷಿ ಕಾಯ್ದೆ : ಕೇಂದ್ರದ ಪ್ರಸ್ತಾವನೆ ತಿರಸ್ಕರಿಸಿದ ರೈತರು

ನವದೆಹಲಿ, ಡಿ. 9 – ನೂತನ ಕೃಷಿ ಕಾಯ್ದೆಗಳಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಮುಂದಿಟ್ಟಿರುವ ಪ್ರಸ್ತಾಪಗಳನ್ನು ಒಪ್ಪದ ಪ್ರತಿಭಟನಾ ನಿರತ ರೈತರು, ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿ ಮುಂಬರುವ ದಿನಗಳಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ರೈತ ಮುಖಂಡ ಶಿವ ಕುಮಾರ್, ಸರ್ಕಾರ ಬುಧವಾರ ಕಳಿಸಿರುವ ಪ್ರಸ್ತಾವನೆಗಳಲ್ಲಿ ಹೊಸತೇನೂ ಇಲ್ಲ. ರೈತರ ಸಭೆಯಲ್ಲಿ ಈ ಪ್ರಸ್ತಾಪಗಳನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗಿದೆ ಎಂದಿದ್ದಾರೆ.

ಸರ್ಕಾರ ಕಳಿಸಿರುವ ಪ್ರಸ್ತಾವನೆ ದೇಶದ ರೈತರಿಗೆ ಮಾಡಿರುವ ಅವಮಾನ. ಆದರೆ, ಸರ್ಕಾರ ಮಾತುಕತೆಗೆ

**ಹೋರಾಟ ತೀವ್ರಗೊಳಿಸಲು ಕೃಷಿಕರ ನಿರ್ಧಾರ**

ಹೊಸ ಪ್ರಸ್ತಾವನೆ ಕಳಿಸಿದರೆ ಅದನ್ನು ಪರಿಶೀಲಿಸಬಹುದಾಗಿದೆ ಎಂದವರು ಹೇಳಿದ್ದಾರೆ.

ಡಿಸೆಂಬರ್ 14ರಂದು ಉತ್ತರ ಭಾರತದ ಎಲ್ಲ ರೈತರು ದೆಹಲಿಗೆ ಬರಲು ಕರೆ ನೀಡಲಾಗುವುದು. ದಕ್ಷಿಣದಲ್ಲಿರುವವರು ತಮ್ಮ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಕರೆ ನೀಡಲಾಗುವುದು ಎಂದು ರೈತ ಮುಖಂಡರು ತಿಳಿಸಿದ್ದಾರೆ.

ಡಿಸೆಂಬರ್ 14ರಂದು ಬಿಜೆಪಿ ಸಚಿವರು ಹಾಗೂ ಪಕ್ಷದ ಜಿಲ್ಲಾ ಕಚೇರಿಗಳಿಗೆ ಘೇರಾವ್ ಮಾಡಲಾಗುವುದು. ಪಕ್ಷದ ಮುಖಂಡರಿಗೆ ಬಹಿಷ್ಕಾರ ಹಾಕಲಾಗುವುದು ಎಂದವರು ಹೇಳಿದ್ದಾರೆ. ಡಿಸೆಂಬರ್ 12ರಂದು ದೇಶದ ಎಲ್ಲಾ ಟೋಲ್‌ಗಳನ್ನು ಶುಲ್ಕ ಮುಕ್ತ ಮಾಡಲಾಗುವುದು ಎಂದೂ ಅವರು ತಿಳಿಸಿದ್ದಾರೆ.

ಮಂಗಳವಾರ 13 ರೈತ ಮುಖಂಡರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿದ್ದರು. ಆನಂತರ ಸರ್ಕಾರ ರೈತರಿಗೆ ಕೆಲ ಪ್ರಸ್ತಾವನೆಗಳನ್ನು ಕಳಿಸಿತ್ತು. ಕನಿಷ್ಠ ಬೆಂಬಲ ಬೆಲೆ ಖಾತ್ರಿಗೆ ಲಿಖಿತ ಭರವಸೆ ನೀಡುವುದೂ ಸಹ ಪ್ರಸ್ತಾವನೆಯಲ್ಲಿ ಸೇರಿತ್ತು.

ಸೆಪ್ಟೆಂಬರ್‌ನಲ್ಲಿ (3ನೇ ಪುಟಕ್ಕೆ)

## ಕೃಷಿ ಕಾಯ್ದೆಗಳ ವಾಪಸ್‌ಗಾಗಿ ರಾಷ್ಟ್ರಪತಿಗೆ ವಿಪಕ್ಷಗಳ ಮನವಿ

ನವದೆಹಲಿ, ಡಿ. 9 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎನ್.ಸಿ.ಪಿ.ಯ ಶರದ್ ಪವಾರ್ ಹಾಗೂ ಎಡಪಕ್ಷಗಳ ನಾಯಕರೂ ಸೇರಿದಂತೆ ಪ್ರತಿಪಕ್ಷಗಳ ನಿಯೋಗ ಬುಧವಾರ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಭೇಟಿ ಮಾಡಿದ್ದು, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಮನವಿ ಮಾಡಿಕೊಂಡಿದೆ.

ಐವರು ಸದಸ್ಯರ ನಿಯೋಗದಲ್ಲಿ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ ಹಾಗೂ ಡಿಎಂಕೆ ನಾಯಕ ಟಿ.ಕೆ.ಎಸ್. ಇಳಂಗೋವನ್ ಅವರಿದ್ದರು.

ನಾವು ರಾಷ್ಟ್ರಪತಿ ಭೇಟಿ ಮಾಡಿ ಮೂರು ಕೃಷಿ ಕಾಯ್ದೆಗಳ ಕುರಿತು ನಮ್ಮ ನಿಲುವು ತಿಳಿಸಿದ್ದೇವೆ. ಈ (3ನೇ ಪುಟಕ್ಕೆ)

## ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಉಪಾಧ್ಯಕ್ಷರಾಗಿ ಬಿ.ಶೇಖರಪ್ಪ



ದಾವಣಗೆರೆ,ಡಿ.9- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿ ಬಿ.ಶೇಖರಪ್ಪ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಇಂದು ಮಧ್ಯಾಹ್ನ ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ಶೇಖರಪ್ಪ ಅವರ ಹೆಸರನ್ನು ನಿರ್ದೇಶಕ ಜಗದೀಶಪ್ಪ ಬಣಕಾರ್ ಸೂಚಿಸಿದರೆ, ನಿರ್ದೇಶಕ ಜಿ.ಎನ್. ಸ್ವಾಮಿ ಅನುಮೋದಿಸಿದರು.

ಈವರೆಗೂ ಉಪಾಧ್ಯಕ್ಷರಾಗಿದ್ದ ಬಿ.ಕೆ. ಪ್ರಕಾಶ್ ಅವರು ಹರಪನಹಳ್ಳಿ ತಾಲ್ಲೂಕಿನವರಾಗಿದ್ದು, ದಾವಣಗೆರೆ ಜಿಲ್ಲೆಯಿಂದ ಹರಪನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆಗೆ ಸೇರ್ಪಡೆಯಾದ ಹಿನ್ನೆಲೆಯಲ್ಲಿ ಉಪಾಧ್ಯಕ್ಷ ಸ್ಥಾನ ತೆರವಾಗಿತ್ತು. ಕಾರಣ, ಆ ಸ್ಥಾನಕ್ಕೆ ಇಂದು ಚುನಾವಣೆ ನಡೆಸಲಾಯಿತು. (3ನೇ ಪುಟಕ್ಕೆ)

## ದೂಡಾ ಆಸ್ತಿ ರಕ್ಷಿಸುವ ಕಾರ್ಯಕ್ಕೆ ಕೊನೆ ಇಲ್ಲ

ದಾವಣಗೆರೆ, ಡಿ.9- ನಗರದ ಎಸ್‌ಎಸ್ ಹೈಟೆಕ್ ಆಸ್ಪತ್ರೆಯ ಪ್ರಾಂಗಣದಲ್ಲಿ ಹಾದು ಹೋಗಿರುವ 60 ಅಡಿಯ ಎರಡು ರಸ್ತೆಗಳು ನಗರಾಭಿವೃದ್ಧಿ ಯೋಜನೆಯ (ಸಿಡಿಪಿ) ರಸ್ತೆಗಳಾಗಿದ್ದು, ಅವುಗಳನ್ನು ಅತಿಕ್ರಮಿಸಿರುವುದಾಗಿ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ನೇರವಾಗಿ ಆರೋಪಿಸಿದ್ದಾರೆ.

ಈ ಎರಡೂ ರಸ್ತೆಗಳ ಜಾಗವೇ ಸುಮಾರು 2 ಲಕ್ಷ ಅಡಿ ಆಗಬಹುದು. ರಸ್ತೆ ಅತಿಕ್ರಮಣದ ತನಿಖೆಗೆ ಸೂಚಿಸಿದ್ದು, ಕಾನೂನು ರೀತಿಯಲ್ಲೂ ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳಿಗೆ ಸ್ಥಳಕ್ಕೆ ತೆರಳಿ ಸರ್ವೇ ಮಾಡಲು ಸೂಚಿಸಿದ್ದೇನೆ. ಸಾರ್ವಜನಿಕ ರಸ್ತೆ, ಪಾರ್ಕ್ ಸರ್ಕಾರದ



ಆಸ್ತಿಗಳಾಗಿದ್ದು, ಅವುಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು ಎಂದು ದೂಡಾ ಕಚೇರಿಯಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ಎಸ್‌ಎಸ್ ಹೈಟೆಕ್ ಆಸ್ಪತ್ರೆಯ ಪ್ರಾಂಗಣದಲ್ಲಿ ಹಾದು ಹೋಗಿರುವ 60 ಅಡಿಯ ಎರಡೂ ರಸ್ತೆಗಳ ಅತಿಕ್ರಮಣದ ತನಿಖೆಗೆ ಸೂಚನೆ.**

**- ರಾಜನಹಳ್ಳಿ ಶಿವಕುಮಾರ್**

ಈ ವಿಚಾರವಾಗಿ ಕಾಂಗ್ರೆಸ್ ಪಕ್ಷದ ಸ್ಥಳೀಯ ಮುಖಂಡರು ದೂಡಾ ಕಚೇರಿಗೆ ಬಂದರೆ ದಾಖಲೆ ಸಹಿತ ಎರಡು ರಸ್ತೆಗಳ ಅತಿಕ್ರಮಣದ ಬಗ್ಗೆ ಸಾಬೀತುಪಡಿಸುತ್ತೇನೆ. ಅಲ್ಲಿನ ಎರಡು ರಸ್ತೆಗಳನ್ನು ದೂಡಾ, ನಗರ ಪಾಲಿಕೆಗೆ ಮರಳಿ ಕೊಡಿಸುವ ಕೆಲಸ ಮಾಡಲಿ ಎಂದು ಸವಾಲು (3ನೇ ಪುಟಕ್ಕೆ)

## ಶಿಕ್ಷೆಗೆ ತಡೆಯಾಜ್ಞೆ ಸಿಗದಿದ್ದರೆ ಅನರ್ಹತೆ

ನವದೆಹಲಿ, ಡಿ. 9 – ಅಪರಾಧಿಕ ಪ್ರಕರಣಗಳಲ್ಲಿ ಎರಡು ವರ್ಷಕ್ಕಿಂತ ಹೆಚ್ಚಿನ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯೋರ್ವ ತನ್ನ ಶಿಕ್ಷೆಗೆ ತಡೆಯಾಜ್ಞೆ ಪಡೆಯದೇ ಹೋದರೆ ಚುನಾವಣೆಗೆ ಸ್ಪರ್ಧಿಸುವುದರಿಂದ ಅನರ್ಹನಾಗುತ್ತಾನೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕೇರಳದ ಎರ್ನಾಕುಲಂ (3ನೇ ಪುಟಕ್ಕೆ)


**REQUIRED OPERATORS**

CNC Machine, VMC Machine
and CONVENTIONAL
LATHE Machine.
Min. 4 to 5 Years Experience.

Manoj : 79752 85686
Sharath : 90191 26876
Davanagere


## ರಾಜಸ್ಥಾನ ಸಂಘ-ಸಂಸ್ಥೆಗಳ ಚುನಾವಣೆ

## ಕಾಂಗ್ರೆಸ್‌ಗೆ ಮುಖಭಂಗ

ಜೈಪುರ, ಡಿ. 9 – ರಾಜಸ್ಥಾನದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್‌ಗೆ ತೀವ್ರ ಮುಖಭಂಗವಾಗಿದ್ದು, ಬಿಜೆಪಿ ಗಣನೀಯ ಮುನ್ನಡೆ ಗಳಿಸಿದೆ. ಕೇಂದ್ರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ದೆಹಲಿಯಲ್ಲಿ ಹೋರಾಟ ನಡೆಸುತ್ತಿರುವ ನಡುವೆಯೇ ನಡೆದ ಈ ಚುನಾವಣೆ ಮಹತ್ವ ಪಡೆದುಕೊಂಡಿದೆ.

4,371 ಪಂಚಾಯ್ತಿ ಸಮಿತಿ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ (3ನೇ ಪುಟಕ್ಕೆ)

## ಕಾಂಗ್ರೆಸ್ ಸಭಾತ್ಯಾಗದ ನಡುವೆ ಭೂ ಸುಧಾರಣಾ ಮಸೂದೆಗೆ ವಿಧಾನಸಭೆ ಒಪ್ಪಿಗೆ

ಬೆಂಗಳೂರು, ಡಿ. 9 – ನಿನ್ನೆಯಷ್ಟೇ ವಿಧಾನಪರಿಷತ್ತಿನಲ್ಲಿ ಅಂಗೀಕಾರಗೊಂಡಿದ್ದ ಭೂ ಸುಧಾರಣಾ ತಿದ್ದುಪಡಿ ಮಸೂದೆಗೆ ವಿಧಾನ ಪರಿಷತ್ತು ಬುಧವಾರ ಒಪ್ಪಿಗೆ ನೀಡಿದೆ. ಕಾಂಗ್ರೆಸ್ ಸಭಾತ್ಯಾಗದ ನಡುವೆ ಮಸೂದೆಗೆ ಅಂಗೀಕಾರ ನೀಡಲಾಗಿದೆ.

ಜೆಡಿಎಸ್ ಬೆಂಬಲದೊಂದಿಗೆ ರಾಜ್ಯ ಸರ್ಕಾರ ಈ ಮಸೂದೆಗೆ ನಿನ್ನೆ ವಿಧಾನ ಪರಿಷತ್ತಿನಲ್ಲಿ ಅಂಗೀಕಾರ ಪಡೆದುಕೊಂಡಿತ್ತು.

ಮಸೂದೆಯನ್ನು ಮಂಡಿಸಿ ಮಾತನಾಡಿದ ಕಂದಾಯ ಸಚಿವ ಆರ್. ಅಶೋಕ್, ಮಸೂದೆ ಯಲ್ಲಿ ಹೆಚ್ಚಿನ ಬದಲಾವಣೆ ಮಾಡಿಲ್ಲ. ಕೆಲ ಸಣ್ಣ ಬದಲಾವಣೆಗಳು ಹಾಗೂ ಸ್ಪಷ್ಟನೆಗಳನ್ನು ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಹಿರಿಯ ಶಾಸಕ ಹೆಚ್.ಕೆ. ಪಾಟೀಲ್, ಕೆಲ ತಿದ್ದುಪಡಿಗಳನ್ನು ಪ್ರಸ್ತಾಪಿಸಿದರು. ಇದಕ್ಕೆ ಬಿಜೆಪಿ ಶಾಸಕ ಕೆ.ಜಿ. ಬೋಪಯ್ಯ ಆಕ್ಷೇಪಿಸಿದರು.

ಮಸೂದೆ ಈ ಹಿಂದೆಯೇ ಸದನದಲ್ಲಿ ಅಂಗೀಕಾರಗೊಂಡಿದೆ. ಈ ಹಂತದಲ್ಲಿ ಹೊಸ ಬದಲಾವಣೆಗಳಿಗೆ ಅವಕಾಶವಿಲ್ಲ. ಪರಿಷತ್ತಿನಲ್ಲಿ ಆಗಿರುವ ತಿದ್ದುಪಡಿಗಳ ಕುರಿತು ಚರ್ಚಿಸಬಹುದು. ಪಾಟೀಲರು ಸಂವಿಧಾನಕ್ಕೆ ತಿದ್ದುಪಡಿ ತರಲು ಹೊರಟಿರುವಂತಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಸರ್ಕಾರ ಕೃಷಿಕರಲ್ಲದವರಿಗೆ ಹಾಗೂ ಕಾರ್ಪೋರೇಟ್ ಗಳಿಗೆ ಜಮೀನು ನೀಡುತ್ತಿದೆ ಎಂದರು.

ಇದಕ್ಕೆ ತಿರುಗೇಟು ನೀಡಿದ ಮಾಧುಸ್ವಾಮಿ, 2015ರಲ್ಲಿ ಜಮೀನು ಬಳಕೆ ಕಾಯ್ದೆಗೆ ತಿದ್ದುಪಡಿ ತಂದವರು ಈಗ ಮಾತನಾಡಬಾರದು ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಶಾಸಕರ ನಡುವೆ ಚಕಮಕಿ ನಡೆಯಿತು. ಇದರ ಮಧ್ಯೆಯೇ (3ನೇ ಪುಟಕ್ಕೆ)

## ಅನ್ಯ ಉದ್ದೇಶಕ್ಕೆ ಎಸ್‌ಸಿಪಿ ಟಿಎಸ್‌ಪಿ ಹಣ ಬಳಕೆ

**ಸದನದಲ್ಲಿ ಪಕ್ಷಭೇದ ಮರೆತು ಧರಣಿ**

ಬೆಂಗಳೂರು, ಡಿ. 9 - ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣ ಕಾರ್ಯ ಕ್ರಮಗಳಿಗೆ ಮೀಸಲಿಟ್ಟ ಎಸ್‌ಸಿಪಿ-ಟಿಎಸ್ಪಿ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂದು ಆರೋಪಿಸಿ ಪಕ್ಷಭೇದ ಮರೆತು ಶಾಸಕರು ವಿಧಾನಸಭೆಯಲ್ಲಿಂದು ಧರಣಿ ನಡೆಸಿ ಕೆಲಕಾಲ ಸದನ ಮುಂದೂಡಿದ ಪ್ರಸಂಗ ನಡೆಯಿತು.

ಶೂನ್ಯವೇಳೆಯಲ್ಲಿ ಶಾಸಕ ಪಿ.ರಾಜೀವ್ ಅವರು (2ನೇ ಪುಟಕ್ಕೆ)

## ಅಂಗನವಾಡಿ ಕಾರ್ಯಕರ್ತೆಯರ ಖಾಯಂ ಸಾಧ್ಯವಿಲ್ಲ : ಶಶಿಕಲಾ

ಬೆಂಗಳೂರು, ಡಿ.9 - ಅಂಗನವಾಡಿ ಕಾರ್ಯಕರ್ತೆಯರನ್ನು ಖಾಯಂಗೊಳಿಸಲು ಸಾಧ್ಯವಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ವಿಧಾನಸಭೆಯಲ್ಲಿಂದು ಪ್ರಕಟಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಹರೀಶ್ (3ನೇ ಪುಟಕ್ಕೆ)


## ಗುಬ್ಬಿ ಕುಮಾರ್ ಜಾಧವ್ ನಿಧನ



ದಾವಣಗೆರೆ ಶಿವಾಜಿ ಸರ್ಕಲ್ ಸಿದ್ದಣ್ಣನ ಗಲ್ಲಿ ವಾಸಿ

**ಗುಬ್ಬಿ ಕುಮಾರ್ ಜಾಧವ್ (60)**

ಅವರು, ದಿನಾಂಕ 9.12.2020 ರಂದು ಬುಧವಾರ ಮಧ್ಯಾಹ್ನ 1.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು, ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.12.2020 ರಂದು ಗುರುವಾರ ಮಧ್ಯಾಹ್ನ 12.30ಕ್ಕೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ**

# ಅನ್ಯ ಉದ್ದೇಶಕ್ಕೆ ಎಸ್‌ಸಿಪಿ, ಟಿಎಸ್‌ಪಿ ಹಣ ಬಳಕೆ

(1ನೇ ಪುಟದಿಂದ) ಎಸ್‌ಸಿ-ಟಿಎಸ್‌ಪಿಯಲ್ಲಿ ಪರಿಶಿಷ್ಟ ಜಾತಿ, ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಹಣ, ಮೆಟ್ರೋ, ಸ್ಟೀಲ್ ಬ್ರಿಡ್ಜ್ ನಿರ್ಮಾಣ ಸೇರಿದಂತೆ ಬೇರೆ ಬೇರೆ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದಾಗ, ಇದಕ್ಕೆ ದನಿಗೂಡಿಸಿದ ಜೆಡಿಎಸ್ ಶಾಸಕ ಹೆಚ್.ಕೆ.ಕುಮಾರಸ್ವಾಮಿ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಹಣ ದುರುಪಯೋಗವಾಗುತ್ತಿದೆ ಎಂದರು.

ಈ ವೇಳೆ ಹಲವು ಸದಸ್ಯರು ಕಾಯ್ದೆಯ ಉಲ್ಲಂಘನೆ ಯಾಗುತ್ತಿದೆ ಎಂದು ಆರೋಪಿಸಿದರು. ಇದಕ್ಕೆ ಉತ್ತರ ನೀಡಿದ ಸಚಿವ ಬಿ.ಶ್ರೀರಾಮುಲು ಡೀಮ್ಡ್ ವೆಚ್ಚ ಮಾಡಬಾರದೆಂದು ಹೇಳಿದ್ದೇನೆ. ಎಸ್‌ಸಿಪಿ-ಟಿಎಸ್ಪಿಯಲ್ಲಿ ಡೀಮ್ಡ್ ಎಕ್ಸ್‌ಪೆಂಡೆಚರ್ ಎಷ್ಟು ತೆಗೆದುಕೊಳ್ಳಬೇಕು, ಎಷ್ಟು ಬಿಟ್ಟುಕೊಡಬೇಕು ಎಂಬುದು ನಿರ್ಧಾರವಾಗಿಲ್ಲ. ಸಿಎಂ ಜತೆ ಚರ್ಚಿಸಿ ನಿರ್ಧರಿಸಲಾಗುವುದು ಎಂದರು.

ಆಗ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಹಾಗೂ ಎಂ.ಪಿ.ಕುಮಾರಸ್ವಾಮಿ ಸೇರಿದಂತೆ ಹಲವರು ಇದಕ್ಕೆ ಆಕ್ಷೇಪಿಸಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ ಎಂದರೂ ಸದಸ್ಯರು ಪಟ್ಟು ಹಿಡಿದಾಗ ಅರ್ಧ ಗಂಟೆಕಾಲ ಚರ್ಚೆಗೆ ಅವಕಾಶ ನೀಡುವುದಾಗಿ ಹೇಳಿದರು.

ಇಷ್ಟಕ್ಕೂ ತೃಪ್ತಿಯಾಗದ ಎನ್.ಮಹೇಶ್, ಎಂ.ಪಿ. ಕುಮಾರಸ್ವಾಮಿ, ಡಾ.ಅನ್ನದಾನಿ, ಹೆಚ್.ಕೆ.ಪಾಟೀಲ್ ಸೇರಿದಂತೆ ಹಲವರು ಪಕ್ಷಭೇದ ಮರೆತು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಮಾಡಿದರು.

ಈ ಹಂತದಲ್ಲಿ ಸಭಾಧ್ಯಕ್ಷರು ಸದಸ್ಯರು ಸಹಕರಿಸಬೇಕು. ವಿಷಯದ ಗಂಭೀರತೆ ಅರಿತು ಚರ್ಚೆಗೆ ಅರ್ಧಗಂಟೆ ಕಾಲಾವಕಾಶ ನೀಡಿದ್ದೇನೆ. ತಮ್ಮ ಸ್ಥಾನಗಳಿಗೆ ಸದಸ್ಯರು ಮರಳಬೇಕು ಎಂದರು.

ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಎಸ್‌ಸಿಪಿ -ಟಿಎಸ್ಪಿ ಹಣ ದುರುಪಯೋಗವಾಗಬಾರದು. ಆಯಾ ವರ್ಷವೇ ಖರ್ಚಾಗಬೇಕು. ಸಕಾಲದಲ್ಲಿ ಖರ್ಚಾಗದಿದ್ದರೆ ಮುಂದಿನ ವರ್ಷದ ಹಣದ ಜತೆ ಈ ಹಣವೂ ಖರ್ಚಾಗಬೇಕು. ಲ್ಯಾಪ್ಸ್ ಆಗಬಾರದು ಎಂದರು.

ಕಳೆದ ವರ್ಷ 30 ಸಾವಿರ ಕೋಟಿ ರೂ. ಇತ್ತು. ಈ ವರ್ಷ 26 ಸಾವಿರ ಕೋಟಿ ಆಗಿದೆ. ಹೀಗೇ ಆದರೆ 15 ಸಾವಿರ ಕೋಟಿಗೆ ಇಳಿಯಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ಈ ಸರ್ಕಾರ ಎಸ್ಸಿ-ಎಸ್ಟಿ ಪರವಿಲ್ಲ. ಪರೋಕ್ಷವಾಗಿ ಹಣ ಬಳಕೆ ಮಾಡಲು ಹೊರಟಿದೆ. ಇದನ್ನು ತಾವು ತೀವ್ರವಾಗಿ ಖಂಡಿಸುತ್ತೇವೆ. ನಾವು ಸಹ ಧರಣಿಗೆ ಬರುತ್ತೇವೆ ಎಂದು ಹೇಳುತ್ತಾ ಪೀಠದ ಬಳಿ ತೆರಳಿದರು. ಅಷ್ಟರಲ್ಲಿ ಸಚಿವ ಮಾಧುಸ್ವಾಮಿ ಈ ವಿಚಾರ ಗಂಭೀರವಾಗಿದ್ದು, ಚರ್ಚೆಗೆ ಸರ್ಕಾರ ಸಿದ್ಧವಿದೆ ಎಂದರು. ಆದರೂ ಧರಣಿ ನಿರತರು ಘೋಷಣೆ ಕೂಗಿದರು. ಸಚಿವರ ಉತ್ತರ ವಾಪಸ್ ಪಡೆಯಬೇಕೆಂದು ಅರವಿಂದ ಲಿಂಬಾವಳಿ, ಪ್ರಿಯಾಂಕ್ ಖರ್ಗೆ ಒತ್ತಾಯಿಸಿದರು.

ಸದನದಲ್ಲಿ ಗದ್ದಲ-ಗೊಂದಲದ ವಾತಾವರಣ ಉಂಟಾಗಿದ್ದರಿಂದ ಸದನದ ಕಾರ್ಯ-ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡುವುದಾಗಿ ಸಭಾಧ್ಯಕ್ಷರು ಪ್ರಕಟಿಸಿದರು. ಮತ್ತೆ ಸದನ ಸಮಾವೇಶಗೊಂಡಾಗ ಧರಣಿ ಮುಂದುವರೆಯಿತು. ಆಗ ಸಿದ್ದರಾಮಯ್ಯ ಮಾತನಾಡಿ, ಸಚಿವರು ನೀಡಿರುವ ಉತ್ತರವನ್ನು ವಾಪಸ್ ಪಡೆಯಬೇಕು. ಕಾನೂನನ್ನು ದುರ್ಬಲಗೊಳಿಸಬಾರದು. ಯಥಾರೀತಿ ಮುಂದುವರೆಸಬೇಕು ಎಂದರು.

ಸಚಿವ ಶ್ರೀರಾಮುಲು ತಾವು ನೀಡಿದ ಉತ್ತರವನ್ನು ವಾಪಸ್ ಪಡೆಯುತ್ತಿರುವುದಾಗಿ ಹೇಳಿದರು. ಕಳೆದ 2-3 ವರ್ಷಗಳಿಂದ ಯಾವ ರೀತಿ ಮುಂದುವರೆಯಿತೋ ಅದೇ ರೀತಿ ಮುಂದುವರೆಯಲಿದೆ. ಮತ್ತೆ ಸದನಕ್ಕೆ ತಂದು ಸೂಕ್ತ ತೀರ್ಮಾನ ಮಾಡಲಾಗುವುದು ಎಂದರು. ಆಗ ಸಭಾಧ್ಯಕ್ಷರು ಧರಣಿ ಕೈಬಿಟ್ಟು ಸದಸ್ಯರ ಸ್ವಸ್ಥಾನಗಳಿಗೆ ಮರಳಬೇಕೆಂದಾಗ ಧರಣಿ ಕೈಬಿಡಲಾಯಿತು.

## ಸಾರಿಗೆಗೆ 4 ಸಾವಿರ ಬಸ್ ಖರೀದಿ

(1ನೇ ಪುಟದಿಂದ) ಖರೀದಿಸಲಾಗುವುದು ಎಂದಿದ್ದಾರೆ.

ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ನಿಗಮಗಳು ಸಂಕಷ್ಟಕ್ಕೆ ಸಿಲುಕಿದವು. ಅಲ್ಲದೆ, ಬಸ್‌ಗಳ ನಿರ್ಮಾಣದಲ್ಲೂ ವಿಳಂಬವಾದ್ದರಿಂದ ಖರೀದಿಯಾಗಿಲ್ಲ. ಇನ್ನು ಮುಂದೆ ಅವುಗಳನ್ನು ಖರೀದಿ ಮಾಡಿ ಹೆಚ್ಚು ಗ್ರಾಮೀಣ ಸೇವೆಗೆ ಒದಗಿಸುವ ಭರವಸೆ ನೀಡಿದರು.

ಸಾರಿಗೆ ನೌಕರರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಲು ಸದ್ಯಕ್ಕೆ ಸಾಧ್ಯವಿಲ್ಲ. ಕೊರೊನಾ ಸೋಂಕಿನಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಒಂದು ನಿಗಮದ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಿದರೇ, ಬೇರೆಯವರೂ ಇದೇ ಬೇಡಿಕೆ ಇಡುತ್ತಾರೆ. ಸದ್ಯಕ್ಕೆ ಇದು ಸಾಧ್ಯವಿಲ್ಲ. ಮುಂದಿನ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ವರದಿಯನ್ನು ಸಿದ್ದಪಡಿಸಿ ತೀರ್ಮಾನ ಕೈಗೊಳ್ಳುವುದಾಗಿ ಶಾಸಕ ಜಿ.ಟಿ. ದೇವೇಗೌಡರ ಪ್ರಸ್ತಾಪಕ್ಕೆ ಉತ್ತರಿಸಿದರು.

ಕಳೆದ ನವೆಂಬರ್ ಅಂತ್ಯದವರೆಗೂ ಸಾರಿಗೆ ನೌಕರರಿಗೆ ಪೂರ್ಣವೇತನ ನೀಡಲಾಗಿದೆ. ನವೆಂಬರ್ ತಿಂಗಳ ವೇತನವನ್ನು ಇನ್ನೊಂದು ವಾರದಲ್ಲಿ ಬಿಡುಗಡೆ ಮಾಡುವುದಾಗಿ ಹರ್ಷವರ್ಧನ ಅವರ ಪ್ರಸ್ತಾವಕ್ಕೆ ತಿಳಿಸಿದರು.

## ಗೋಹತ್ಯೆ ತಡೆ ಮಸೂದೆಗೆ ಅಂಗೀಕಾರ

(1ನೇ ಪುಟದಿಂದ) ತೆಗೆದುಕೊಳ್ಳ ಲಾಗಿತ್ತು. ಕೇವಲ ಸುಗ್ರೀವಾಜ್ಞೆಗಳನ್ನಷ್ಟೇ ಜಾರಿಗೆ ತರಬೇಕೆಂದು ನಿರ್ಧರಿಸಲಾಗಿತ್ತು. ಆದರೆ, ಚವಾಣ್ ಹಠಾತ್ತನೆ ಮಸೂದೆ ಮಂಡಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದರು. ಆದರೆ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಪ್ರಮುಖ ಮಸೂದೆಗಳನ್ನು ಬುಧವಾರ ಹಾಗೂ ಗುರುವಾರ ಮಂಡಿಸುವುದಾಗಿ ಸ್ಪಷ್ಟಪಡಿಸಿದ್ದಾಗಿ ತಿಳಿಸಿದರು. ಇದರಿಂದ ತೃಪ್ತರಾಗದ ಕಾಂಗ್ರೆಸ್ ಶಾಸಕರು, ಸದನದ ಬಾವಿಗೆ ನುಗ್ಗಿ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮಸೂದೆ ಜಾರಿಯಾದರೆ ಅದು ಕೋಮುವಾದಿ ಧ್ರುವೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಅಲ್ಪಸಂಖ್ಯಾತರನ್ನು ಗುರಿ ಮಾಡಲಾಗುತ್ತದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಉತ್ತರ ಪ್ರದೇಶ ಹಾಗೂ ಗುಜರಾತ್ ಮಾದರಿಯಲ್ಲೇ ಕಠಿಣ ಕಾಯ್ದೆ ರೂಪಿಸುವುದಾಗಿ ಚೌಹಾಣ್ ತಿಳಿಸಿದ್ದರು. ಚೌಹಾಣ್ ನೇತೃತ್ವದ ಅಧಿಕಾರಿಗಳ ತಂಡ ಇತ್ತೀಚೆಗೆ ಉತ್ತರ ಪ್ರದೇಶ ಹಾಗೂ ಗುಜರಾತ್‌ಗಳಿಗೆ ಭೇಟಿ ನೀಡಿ ಕಾಯ್ದೆ ಜಾರಿಯ ಕುರಿತು ಪರಿಶೀಲಿಸಿತ್ತು.

## ಮಲೇಬೆನ್ನೂರಿನಲ್ಲಿ ಬಂದ್ ಬೆಂಬಲಿಸಿ ಪ್ರತಿಭಟನೆ



ಮಲೇಬೆನ್ನೂರು, ಡಿ.9- ಕೇಂದ್ರ ಸರ್ಕಾರದ ಜನ ವಿರೋಧಿ ಹಾಗೂ ರೈತ ವಿರೋಧಿ ನೀತಿಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ರೈತ ಸಂಘಟನೆಗಳು ಕರೆ ನೀಡಿದ್ದ ಭಾರತ್ ಬಂದ್ ಬೆಂಬಲಿಸಿ ಮಲೇಬೆನ್ನೂರಿನಲ್ಲೂ ಪ್ರತಿಭಟನೆ ನಡೆಸಲಾಯಿತು.

ರೈತ ಸಂಘಗಳು ಮತ್ತು ಕಾಂಗ್ರೆಸ್ ಪಕ್ಷದವರು ಜಂಟಿಯಾಗಿ ಇಲ್ಲಿನ ನೀರಾವರಿ ಇಲಾಖೆಯಿಂದ ನಾಡ ಕಛೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಉಪತಹಶೀಲ್ದಾರ್ ಆರ್. ರವಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನಾಕಾರರು ಪ್ರತಿಭಟನಾ ಮೆರವಣಿಗೆಯನ್ನು ಮಾತ್ರ ನಡೆಸಿ, ಪಟ್ಟಣದಲ್ಲಿ ನಂತರ ಹರಿಹರಕ್ಕೆ ತೆರಳಿದರು.

ಹಾಗಾಗಿ ಯಾವುದೇ ಅಂಗಡಿ, ಮುಂಗಟ್ಟುಗಳನ್ನು ಬಂದ್ ಮಾಡಿಸಲಿಲ್ಲ, ಎಂದಿನಂತೆ ವ್ಯಾಪಾರ-ವಹಿವಾಟು ನಡೆಯಿತು. ಆದರೂ ಜನ ಸಂಚಾರ ವಿರಳವಾಗಿತ್ತು.

ಹರಿಹರ ತಾ. ರೈತ ಸಂಘದ ಅಧ್ಯಕ್ಷ ಮಂಜುನಾಥ್ ಕೋಗಳಿ, ಗೌರವಾಧ್ಯಕ್ಷ ಬಿ. ಬಸಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಎಪಿಎಂಸಿ ಸದಸ್ಯ ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಪಿಎಸಿಎಸ್ ಮಾಜಿ ಅಧ್ಯಕ್ಷ ಕೆ.ಪಿ. ಗಂಗಾಧರ್, ರೈತ ಸಂಘದ ಗಡಗಿ ಆನಂದಪ್ಪ, ಕೊಕ್ಕನೂರು ಅಂಜಿನಪ್ಪ, ಕೆ.ಹೆಚ್. ಶಿವರಾಜ್, ತಿಪ್ಪೇಶ್‌ನಾಯ್ಕ, ಎಲ್. ರವಿನಾಯ್ಕ್, ಟಿ. ಫೈಜುಲ್ಲಾ, ಟಿ. ಶಿವಣ್ಣ, ಎಸ್. ಬಸವರಾಜ್, ಹನುಮಂತಪ್ಪ, ತಾ. ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಎಂ. ವಾಸುದೇವಮೂರ್ತಿ, ಕೊಟ್ರೇಶ್‌ನಾಯ್ಕ, ಪಿ. ಹಾಲೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಹೋರಾಟದ ಹಾದಿಯಲ್ಲಿ ಸಾಗಿದ ಯುವತಿಗೆ ಆಟೋ ಡಿಕ್ಕಿ: ಗಾಯ

ದಾವಣಗೆರೆ, ಡಿ.9- ಬಂದ್ ಹಿನ್ನೆಲೆಯಲ್ಲಿ ಹೋರಾಟದ ಸ್ಥಳದಲ್ಲಿ ಸಾಗುತ್ತಿದ್ದ ವೇಳೆ ಆಟೋ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಯುವತಿಯೋರ್ವಳು ಗಾಯಗೊಂಡಿರುವ ಘಟನೆ ನಗರದಲ್ಲಿ ನಿನ್ನೆ ನಡೆದಿದೆ.

ಮಣಿಕಂಠ ಸರ್ಕಲ್‌ನ ನಿವಾಸಿ ಸುನೀತಾ ಗಾಯಗೊಂಡ ಯುವತಿ. ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಯುತ್ತಿದ್ದ ವೇಳೆ ಅದೇ ಮಾರ್ಗವಾಗಿ ನಡೆದುಕೊಂಡು ಸಾಗುತ್ತಿದ್ದ ಈಕೆಗೆ ಆಟೋ ಡಿಕ್ಕಿಯಾಗಿದ್ದು, ಅದರ ರಭಸಕ್ಕೆ ಕೆಲ ಕಾಲ ಮೂರ್ಛೆ ತಪ್ಪಿದ್ದರು.

ಸ್ಥಳದಲ್ಲಿ ಕರ್ತವ್ಯ ನಿರತ ಪೊಲೀಸರು ಹಾಗೂ ಪ್ರತಿಭಟನಾಕಾರರು ಯುವತಿಯ ಜೀವ ರಕ್ಷಣೆಗೆ ಮುಂದಾಗಿದ್ದಾರೆ. ತಲೆ, ಕೈಗೆ ಸಣ್ಣಪುಟ್ಟ ಗಾಯಗಳಾಗಿದ್ದ ಸುನಿತಾ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

# ವಾಲ್ಮೀಕಿ ಜಾತ್ರೆ ಜ್ಞಾನದ ಹಸಿವು, ಸ್ವಾಭಿಮಾನ ಹುಟ್ಟುಹಾಕುವ ವೇದಿಕೆ

### ಹೂವಿನಹಡಗಲಿ ಸಭೆಯಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ



ಹೂವಿನಹಡಗಲಿ, ಡಿ.9- ವಾಲ್ಮೀಕಿ ಜಾತ್ರೆ ಸಮುದಾಯದ ಜನರಲ್ಲಿ ಜ್ಞಾನದ ಹಸಿವನ್ನು ಮತ್ತು ಸ್ವಾಭಿಮಾನವನ್ನು ಹುಟ್ಟುಹಾಕುವ ವೇದಿಕೆಯಾಗಿದೆ ಎಂದು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಜರುಗಿದ ವಾಲ್ಮೀಕಿ ಜಾತ್ರೆ ಪೂರ್ವಭಾವಿ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜ ಈ ನಾಡು, ನುಡಿಗೆ ತನ್ನದೇ ಆದ ಕೊಡುಗೆ ನೀಡಿದೆ. ಇಂತಹ ಭವ್ಯ ಸಾಂಸ್ಕೃತಿಕ ಹಿನ್ನೆಲೆ ಹೊಂದಿರುವ ಸಮುದಾಯ, ಜಾತ್ರೆಯ ಮೂಲಕ ನಾವೆಲ್ಲರೂ ಜಾಗೃತರಾಬೇಕಿದೆ ಎಂದರು.

ಸರ್ಕಾರ ಮೀಸಲಾತಿ ವಿಚಾರದಲ್ಲಿ ಬೇಡಿಕೆ ಈಡೇರಿಸುವ ಭರವಸೆ ನೀಡಿ ಕಾಲಹರಣ ಮಾಡುತ್ತಿದೆ. ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಸಚಿವ ಸಂಪುಟ ಉಪ ಸಮಿತಿಯು ಶೀಘ್ರವೇ ಜಾರಿಗೆ ತರಬೇಕು. ವಾಲ್ಮೀಕಿ ನಾಯಕ ಸಮಾಜಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ. 7.5 ಮೀಸಲಾತಿ ನೀಡಬೇಕು ಎಂದರು.

ರಾಜ್ಯದಲ್ಲಿ ಯಾವುದೇ ಸರ್ಕಾರವಿರಲಿ, ಯಾರೇ ಮುಖ್ಯ ಮಂತ್ರಿಗಳಿರಲಿ ನಮಗೆ ನ್ಯಾಯಬದ್ಧವಾದ ಮೀಸಲಾತಿ ಹೆಚ್ಚಿಸಬೇಕು. ರಾಜ್ಯದ 4 ನೇ ಅತಿ ದೊಡ್ಡ ಸಮಾಜದಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ ಎಂದರು.

ಇದೇ ವೇಳೆ ವಾಲ್ಮೀಕಿ ಸೇವಾ ಸಮಿತಿಗೆ (ವಿ.ಎಸ್.ಎಸ್.) ಪದಾಧಿಕಾರಿಗಳ ಆಯ್ಕೆ ನಡೆಯಿತು. ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಹೊನ್ನಪ್ಪ, ಮುಖಂಡರಾದ ಹನುಮಂತಪ್ಪ, ಶ್ರೀನಿವಾಸ ಇನ್ನಿತರರಿದ್ದರು.

## ಕೂಡ್ಲಿಗಿ ಭಾಗಶಃ ಬಂದ್, ರೈತ ಸಂಘಟನೆಗಳಿಗೆ ಕಾಂಗ್ರೆಸ್ ಸಾಥ್



ಕೂಡ್ಲಿಗಿ, ಡಿ.9 - ಕೇಂದ್ರ ಸರ್ಕಾರ ರೈತರ ಬದುಕನ್ನು ಬೀದಿಗೆ ತಳ್ಳುವ ಮೂರು ಕೃಷಿ ಕಾಯಿದೆಗಳನ್ನು ಹಿಂಪಡೆಯಬೇಕು. ಈ ಮೂಲಕ ರೈತ ಪರಂಪರೆಯನ್ನು ದೇಶದಲ್ಲಿ ಉಳಿಸಬೇಕೆಂದು ರೈತ ಸಂಘಟನೆಯ ಮುಖಂಡರಾದ ದೇವರಮನಿ ಮಹೇಶ್ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು. ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ವಿರುದ್ಧ ನಿನ್ನೆ ಕರೆ ನೀಡಿದ್ದ ಭಾರತ್ ಬಂದ್ ಸಂದರ್ಭದಲ್ಲಿ ಪಟ್ಟಣದ ಮದಕರಿನಾಯಕ ವೃತ್ತದಲ್ಲಿ ಮಾತನಾಡಿದರು.

ಕಾಂಗ್ರೆಸ್ ಜಿಲ್ಲಾ ಎಸ್.ಟಿ. ಮೋರ್ಚಾ ಅಧ್ಯಕ್ಷ ಕಾವಲ್ಲಿ ಶಿವಪ್ಪ ನಾಯಕ ಮಾತನಾಡಿದರು. ಕೂಡ್ಲಿಗಿ ರೈತ ಸಂಘ, ಹಸಿರು ಸೇನೆ, ಮಾದಿಗ ದಂಡೋರ, ದಲಿತ ಸಂಘರ್ಷ ಸಮಿತಿ ಸಾಗರ ಬಣ, ಬೀದಿಬದಿ ವ್ಯಾಪಾರಿಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಗುನ್ನಳ್ಳಿ ರಾಘವೇಂದ್ರ, ಕಾಂಗ್ರೆಸ್ ಮಹಿಳಾ ಮುಖಂಡರಾದ ಜಿಂಕಲ್ ನಾಗಮಣಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಮಂಜುನಾಥ ಮಯೂರ, ಡಿ.ಎಚ್. ದುರುಗೇಶ್, ನಲ್ಲಮುತ್ತು ದುರುಗೇಶ್, ಶುಕುರ್, ಕಕ್ಕುಪ್ಪಿ ಬಸವರಾಜ, ಹಿರೇಕುಂಬಳಗುಂಟೆ ಉಮೇಶ್, ಕಾಲ್ಚೆಟ್ಟಿ ಕೃಷ್ಣ ಗುಜ್ಜಲ್ಹರೀಶ್ ಅಜೇಯ್ರಾ ಮಾಶಾಲಿ ಮತ್ತಿತರರು ಹಾಜರಿದ್ದರು.

## ವರ್ಷ ಪಶು ಸಂಜೀವಿನಿ ಜಾರಿ

(1ನೇ ಪುಟದಿಂದ) ಉತ್ತರಿಸಿದ ಸಚಿವರು, ರೈತರ ಮನೆ ಬಾಗಿಲಿಗೆ ಪಶು ಚಿಕಿತ್ಸಾ ವಾಹನಗಳು ಬಂದು ರಾಸುಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಎಂದರು. ರೈತರು ದೂರುಗಳನ್ನು ಹೇಳಲು ಸಹಾಯವಾಣಿ ತೆರೆಯಲಾಗುವುದು. ದೂರು ಸಲ್ಲಿಕೆಯಾದ 24 ಗಂಟೆಯೊಳಗೆ ಚಿಕಿತ್ಸೆ ಒದಗಿಸಲಾಗುವುದು ಎಂದು ಹೇಳಿದರು. ಪಶುವೈದ್ಯರ ಕೊರತೆ ಇದೆ. ಖಾಲಿ ಹುದ್ದೆ ಭರ್ತಿಗೆ ಮತ್ತು ಹೆಚ್ಚುವರಿ ನೇಮಕ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

## ಚಾಲಕನ ಅಜಾಗರೂಕತೆ: ಸಾವು

ದಾವಣಗೆರೆ, ಡಿ.9- ಚಾಲಕನು ವೇಗವಾಗಿ ಚಲಿಸಿದ ಕಾರಣ ನಿಯಂತ್ರಣ ತಪ್ಪಿದ ಬೈಕ್ ಮರಕ್ಕೆ ಡಿಕ್ಕಿಯಾಗಿ ಬೈಕ್‌ನ ಹಿಂಬದಿ ಸವಾರ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಆನಗೋಡು ಗ್ರಾಮದ ಸಮೀಪದ ಆನಗೋಡು-ಶಿವಪುರ ರಸ್ತೆಯ ತಿರುವಿನಲ್ಲಿ ಇಂದು ನಡೆದಿದೆ. ತಾಲ್ಲೂಕಿನ ಸಿದ್ದನೂರು ಗ್ರಾಮದ ಎಸ್.ಆರ್. ರಾಜು ಮೃತ ದುರ್ದೈವಿ. ಅದೇ ಗ್ರಾಮದ ಪರಶುರಾಮ ಎಂಬಾತ ತಿರುವಿನಲ್ಲಿ ವೇಗವಾಗಿ ಚಲಿಸಿದ ಪರಿಣಾಮ ನಿಯಂತ್ರಣಕ್ಕೆ ಸಿಗದೇ ಬೈಕ್ ಮರದ ಹತ್ತಿರ ನಿಂತಿದ್ದ ಅದೇ ಗ್ರಾಮದ ರಮೇಶನಿಗೆ ಡಿಕ್ಕಿಪಡಿಸಿ, ನಂತರ ಮರಕ್ಕೆ ಗುದ್ದಿದೆ. ಗಾಯಗೊಂಡಿದ್ದ ರಮೇಶನನ್ನು ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತವಾಗುತ್ತಿದ್ದಂತೆ ಬೈಕ್ ಬಿಟ್ಟು ಚಾಲಕ ಪರಶುರಾಮ ಪರಾರಿಯಾಗಿದ್ದಾನೆ. ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕ್ರೇನ್ ಡಿಕ್ಕಿ : ಅಕ್ಕ - ತಮ್ಮನ ಸಾವು

ದಾವಣಗೆರೆ, ಡಿ.9- ಕ್ರೇನ್ ಡಿಕ್ಕಿಯಾದ ಪರಿಣಾಮ ಭಿಕ್ಷೆ ಬೇಡುತ್ತಿದ್ದ ಅಕ್ಕ-ತಮ್ಮ ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಚನ್ನಗಿರಿ ತಾಲ್ಲೂಕಿನ ನಲ್ಲೂರು ಗ್ರಾಮದ ಸೇತುವೆ ಬಳಿ ಇಂದು ಬೆಳಿಗ್ಗೆ ನಡೆದಿದೆ. ಉತ್ತರ ಪ್ರದೇಶ ಮೂಲದ ಮನೀಸಾ (18), ಅನಂತ್ ಸಿಂಗ್ (12) ಮೃತ ದುರ್ದೈವಿಗಳು. ಅಕ್ಕ ಮನೀಸಾಳು ವ್ಹೀಲ್ ಚೇರ್‌ನಲ್ಲಿ ವಿಶೇಷ ಚೇತನನಾದ ತನ್ನ ಸಹೋದರನನ್ನು ಕೂರಿಸಿಕೊಂಡು ಭಿಕ್ಷೆ ಬೇಡುತ್ತಾ ರಸ್ತೆ ದಾಟುತ್ತಿದ್ದಾಗ ಚನ್ನಗಿರಿಯಿಂದ ನಲ್ಲೂರಿಗೆ ಬರುತ್ತಿದ್ದ ಕ್ರೇನ್ ಏಕಾಏಕಿ ವ್ಹೀಲ್ ಚೇರ್ ಗೆ ಡಿಕ್ಕಿ ಹೊಡೆದಿದೆ. ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿವಿಧ ಪಕ್ಷ ಸಂಘಟನೆಗಳ ಪ್ರತಿಭಟನೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಡಿ.9 - ಭಾರತ ಬಂದ್ ಪ್ರಯುಕ್ತ ಇಲ್ಲಿನ ರೈತ ಸಂಘದ ಜೊತೆ ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರು ಬಸ್ ನಿಲ್ದಾಣದ ಬಳಿ ಪ್ರತಿಭಟಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ರವಿ ಪಾಟೀಲ, ಪುಟ್ಟಪ್ಪ ಮರಿಯಮ್ಮನವರ, ಬಸವರಾಜ ಕೊಂಗಿ, ನಿಂಗರಾಜ ಕೋಡಿಹಳ್ಳಿ, ಶೇಕಪ್ಪ ಬೇಡರ, ಬಸವರಾಜ ಹುಚ್ಚಗೊಂಡರ ಮುಂತಾದವರಿದ್ದರು.

## ಬಂದ್ ಬೆಂಬಲಿಸಿ ಕಾಂಗ್ರೆಸ್ ಪ್ರತಿಭಟನೆ





ಜಗಳೂರು, ಡಿ.9- ರೈತ ಸಂಘಟನೆಗಳು ನೀಡಿದ್ದ ಭಾರತ್ ಬಂದ್ ಬೆಂಬಲಿಸಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪಕ್ಷದ ಕಾರ್ಯಕರ್ತರು ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿವರೆಗೆ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಅವರುಗಳು ಮಾತನಾಡಿ, ಬಿಜೆಪಿ ಪಕ್ಷದ ಮೂರು ಸುಗ್ರೀವಾಜ್ಞೆ ಕಾಯ್ದೆಗಳು ರೈತರ ಪಾಲಿಗೆ ಮರಣ ಶಾಸನವಾಗಿದ್ದು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ತಾಲ್ಲೂಕು ಕೆಪಿಸಿಸಿ ಉಸ್ತುವಾರಿ ಕಲ್ಲೇಶ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಯುವ ಕಾಂಗ್ರೆಸ್ ಅಧ್ಯಕ್ಷ ಅಜಾಮುಲ್ಲಾ, ಮುಖಂಡರಾದ ಬಿ. ಲೋಕೇಶ್, ವೆಂಕಟೇಶ್, ಸಿ. ತಿಪ್ಪೇಸ್ವಾಮಿ, ರೇವಣ್ಣ, ಹಟ್ಟಿ ತಿಪ್ಪೇಸ್ವಾಮಿ, ಶ್ರೀನಿವಾಸ್, ಚೌಡಪ್ಪ, ರಾಜಣ್ಣ, ರಮೇಶ್, ಮಹಿಳಾ ಘಟಕದ ಸಾವಿತ್ರಮ್ಮ, ಕೆಂಚಮ್ಮ ಹಾಗು ಇನ್ನಿತರರು ಪಾಲ್ಗೊಂಡಿದ್ದರು.

## ವಿ. ಪ್ರಶಾಂತ್ ನಿಧನ



ದಾವಣಗೆರೆ ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್, #1968/64, 7ನೇ ಮೇನ್, 7ನೇ ಕ್ರಾಸ್ ವಾಸಿ, ದಿ|| ಎಸ್.ವಿನೋದ್ (KEB) ಅವರ ಪುತ್ರ ವಿ. ಪ್ರಶಾಂತ್ (43) ಅವರು ದಿನಾಂಕ 09.12.2020ರ ಬುಧವಾರ ರಾತ್ರಿ 10.40ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.12.2020ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

## ಇಂದು ಮಾನವ ಹಕ್ಕು ದಿನಾಚರಣೆ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಮಾನವ ಹಕ್ಕುಗಳ ವೇದಿಕೆ, ರಾಜ್ಯ ಕಟ್ಟಡ ಕಟ್ಟುವ, ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನವ ಹಕ್ಕುಗಳ ದಿನಾಚರಣೆ. ಸಮಯ : ಬೆಳಿಗ್ಗೆ 10.30 ಕ್ಕೆ. ಸ್ಥಳ: ಕಾನೂನು ಸೇವಾ ಪ್ರಾಧಿಕಾರದ ಕಚೇರಿ. ಉದ್ಘಾಟನೆ : ಗೌ. ಕೆಂಗಬಾಲಯ್ಯ. ಅಧ್ಯಕ್ಷತೆ : ಎನ್.ಟಿ. ಮಂಜುನಾಥ್. ಅತಿಥಿಗಳು : ಪ್ರೀತಿ ಎಸ್. ಜೋಷಿ, ಎಚ್.ಜಿ. ಉಮೇಶ್, ವಿ. ಲಕ್ಷ್ಮಣ್, ಪಿ.ಕೆ. ಲಿಂಗರಾಜ್, ಎಲ್.ಹೆಚ್. ಅರುಣ್‌ಕುಮಾರ್.


**ಸೈಟುಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇ ಔಟ್‌ನಲ್ಲಿ 40×60 ಪೂರ್ವ, 30×40 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30×36 ಉತ್ತರ, ಡಾಲರ್ಸ್ ಕಾಲೋನಿಯಲ್ಲಿ 30×55 ಉತ್ತರ, ಪೂರ್ವ ಕಾರ್ನರ್
ಶಾಮನೂರು ಧನ್ಯಕುಮಾರ್ ಮೊ.97415 62589
ಸ್ವಾಮಿ ಏಜೆಂಟ್, ವಿದ್ಯಾನಗರ ಮೊ.97421 44715

**ಸೈಟುಗಳು ಮಾರಾಟಕ್ಕಿವೆ ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30×56 ಪೂರ್ವ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20×30 ದಕ್ಷಿಣ, 30×50 ಪೂರ್ವ, ಸಂಕೋಳ್ ಶಿವಪ್ಪ ಬಡಾವಣೆಯಲ್ಲಿ 30×50 ಉತ್ತರ, ವಿನಾಯಕ ಬಡಾವಣೆಯಲ್ಲಿ 30×36 ಉತ್ತರ,
ಸ್ವಾಮಿ ಏಜೆಂಟ್, ವಿದ್ಯಾನಗರ ಮೊ. 97421 44715
ಶಾಮನೂರು ನಾಗರಾಜ ಮೊ.98448 83303

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 28×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, KHB ಕಾಲೋನಿ, 30×40 ಪೂರ್ವ ದಿಕ್ಕು ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ, ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಸೈಟ್‌ಗಳು ಮಾರಾಟಕ್ಕಿವೆ**
60x40 North, 60x40 West 60x40 East, 80x60 East
ವಿನಾಯಕ ಬಡಾವಣೆ, ಸಿದ್ದವೀರಪ್ಪ ಬಡಾವಣೆ, ಎಸ್. ಎಸ್. 'ಎ' ಬ್ಲಾಕ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟ್‌ಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ
30x50 South, 30x40 North, 30x50 East, 30x40 South, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ಶಾಮನೂರು ರಸ್ತೆಯ ಎಸ್. ಎಸ್. ಮಾಲ್ ಎದುರು ಮತ್ತು ಬಾಪೂಜಿ ಶಾಲೆ ಹಿಂಭಾಗದಲ್ಲಿ 2 ಬೆಡ್ ರೂಂ, ಕಾರ್ಪೊರೇಷನ್ ಮತ್ತು ಬೋರ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯ ಇರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94811-61164

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

GST Registration, INCOME TAX & GST CASES, Project Reports, and for Account Maintenances. Contact
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಕಾರ್ ಡ್ರೈವಿಂಗ್ ಬರುವವರಿಗೆ ಮೊದಲ ಆದ್ಯತೆ. ಸಂಬಳ : 9000/-
ನಂದಿ ಟೈರ್ ಪ್ಲಾನೆಟ್
95381 87385, 99161 43003
08192 261003

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಹೋಟೆಲ್ ಗೆ ಅಡುಗೆ ಭಟ್ಟರು ಮತ್ತು ಸಪ್ಲೈಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
99019-58095
90086-76087

NGO ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ:
MEGHANA ASSOCIATES (R)
99809 16126

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ನಿವೇಶನ ಮಾರಾಟಕ್ಕಿದೆ**
30×40ರ ದಕ್ಷಿಣಾಭಿಮುಖವಾಗಿರುವ ಖಾಲಿ ನಿವೇಶನ ಮಾರಾಟಕ್ಕಿದೆ. ಎಸ್.ಎಸ್. ಲೇ ಔಟ್, 'ಬಿ' ಬ್ಲಾಕ್, 4ನೇ ಮುಖ್ಯರಸ್ತೆ, 3ನೇ ಕ್ರಾಸ್, ಇಂಡೋರ್ ಸ್ಟೇಡಿಯಂ ಹತ್ತಿರ.
99720 13143, 97417 03334

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಚೈನೀಸ್ ಫುಡ್, ತಂದೂರಿ ರೊಟ್ಟಿ ಸ್ಪೆಷಲ್ ಟೀ ಮತ್ತು ಕಾಫಿ ಮಾಡುವವರು ಬೇಕಾಗಿದ್ದಾರೆ. ಖಾನಾವಳಿಯಲ್ಲಿ ರೊಟ್ಟಿ/ ಚಪಾತಿ ಮಾಡುವವರು, ಸರ್ವರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
99012 36631
91106 03451

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಬಡಾವಣೆ ಹಾಗೂ ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್ ಮೊ.97315 12365

**ತಕ್ಷಣ ಬೇಕಾಗಿದ್ದಾರೆ**
IMPULSE marketing ನ ಹೊಸ ವಿಭಾಗಕ್ಕೆ 10th, PUC, ITI, Diploma & Any Degree ಆದ ಯುವಕರು Age (18-24) Earn (8000-16000)PM, 1 photo, Resume & Adhar, Xerox ನೊಂದಿಗೆ ಸಂಪರ್ಕಿಸಿ:
81056 00262
97405 12356

**ತಕ್ಷಣ ಕೆಲಸ**
2nd ಪಿಯುಸಿ, ಡಿಗ್ರಿ ಪಾಸ್/ಫೇಲ್ ಆಗಿರುವ ಹುಡುಗಿಯರಿಗೆ ಲಾಯರ್ ರೋಡ್‌ನಲ್ಲಿ, ಆಫೀಸ್ ಕೆಲಸ ಲಭ್ಯವಿದೆ. ದ್ವಿಚಕ್ರ ವಾಹನ ಇರುವವರಿಗೆ ಮೊದಲ ಆದ್ಯತೆ (ಸರ್ಕಾರಿ ನೋಂದಾಯಿತ ಸಂಸ್ಥೆ)
95139 17777

**ಬೇಕಾಗಿದ್ದಾರೆ**
1) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಪುರುಷರು ಹಾಗೂ ದ್ವಿಚಕ್ರ ವಾಹನವುಳ್ಳವರಿಗೆ ಆದ್ಯತೆ.
2) ಲ್ಯಾಬ್ ಟೆಕ್ನೀಷಿಯನ್ ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ:
ಮಿತ್ರ ಹೈ-ಟೆಕ್ ಡಯಾಗ್ನೋಸ್ಟಿಕ್ ಸೆಂಟರ್
ಚಿರಂತನ, 4ನೇ ಮೇನ್, 9ನೇ ಕ್ರಾಸ್, ವಿಶ್ವೇಶ್ವರಯ್ಯ ಪಾರ್ಕ್ ಹಿಂಭಾಗ, ನಂದಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 78928 44849

**ಗೋಡೌನ್ ಬಾಡಿಗೆಗೆ ಇದೆ**
ಸಂತೋಷ ವಿಡಿಯೋ ಕಾಂಪ್ಲೆಕ್ಸ್, ಬಂಬೂ ಬಜಾರ್, ದಾವಣಗೆರೆ.
97432 12009

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಜಮೀನು ಮಾರಾಟಕ್ಕಿದೆ**
ತೆಲಗಿ ಹತ್ತಿರ ಹರಪನಹಳ್ಳಿ ರಸ್ತೆಗೆ @ Rs 18 ಲಕ್ಷ ಎಕರೆಗೆ
74112 50447

**ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆ, ಮೋರ್ ಶಾಪ್ ಪಕ್ಕ (SBI) ಹತ್ತಿರ. ಹದಡಿ ರೋಡ್, ದಾವಣಗೆರೆ.
76191 23623, 94816 70519

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**ಬೇಕಾಗಿದ್ದಾರೆ**
50 ವರ್ಷದ ಪುರುಷರನ್ನು ನೋಡಿಕೊಳ್ಳಲು ಅನಾಥರು/ವಿಧವೆ/ವಿಚ್ಛೇದಿತ 38 ರಿಂದ 45 ವರ್ಷದ ಮಹಿಳೆ ಅವಶ್ಯಕತೆ ಇದೆ. ಆಸಕ್ತಿ ಉಳ್ಳವರು ಕೆಳಗಿನ ಮೊ.ನಂ.ಗೆ ಸಂಪರ್ಕಿಸಿ : ಮನೆಯಲ್ಲಿ ಇರುವ ಸೌಲಭ್ಯ ಇದೆ.
88618 83531

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**REQUIRED MANAGER FOR INDIA'S MOST TRUSTED COMPANY**
MALE / FEMALE
Qualification : Any Degree
Age Limit : 25 to 35 years
Location : Davanagere & Ranebennuru
For more details kindly Contact
78295 17876
Hurry Up Limited Openings

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಸ್ಟಾಕ್ ತೆಗೆಯಲು, ಬಿಲ್ಲಿಂಗ್ ಮಾಡಲು ಮತ್ತು ಸ್ಟಾಕ್ ಚೆಕ್ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ESI + PF ಸೌಲಭ್ಯವಿರುತ್ತದೆ.
ರಾಜಲಕ್ಷ್ಮಿ ಫಾರ್ಮಾ
7ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.
96060 48402

**TO-LET**
2 BHK House & Shop at P.J. Extn ( ideal for clinic) is Available
Contact:
76764 92366

**ಮನು ವಿಡಿಯೋ**
ವಿನೋಬನಗರ ದಾವಣಗೆರೆ
ಮದುವೆ ಮತ್ತು ಶುಭ ಸಮಾರಂಭಗಳಿಗೆ ಫೋಟೋ ಮತ್ತು ವಿಡಿಯೋ
99643 78243 / 94483 39151

**ಮನೆ ಬಾಡಿಗೆಗಿದೆ**
ಎಂ.ಸಿ.ಸಿ. ಬಿ ಬ್ಲಾಕ್ (ಶಂಕರ ಲೀಲಾ ಕಲ್ಯಾಣ ಮಂಟಪ) ನಲ್ಲಿ 2 BHK with Attached bath room ಇರುವ ಮನೆ ಬಾಡಿಗೆಗೆ ಇದೆ. ಕಾರ್ ಪಾರ್ಕಿಂಗ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
96117-44810

**Spece For Rent**
office/Bank/Show Room
Basement 1350 Sqft, 1st Floor 1460 Sqft, 2nd Floor 1460 Sqft, S.S. Layout 'B' Block, Ring Road, opposite D.C. House
96111 99018, 99162 47923

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**JOBS**
MCS ACADEMY
Training & Placement Cell
98444 92888

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET ರೋಡ್ ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
www.bhoomikamatrimony.com
90080 55813

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

## ತಡೆಯಾಜ್ಞೆ ಸಿಗದಿದ್ದರೆ ಅನರ್ಹತೆ

**(1ನೇ ಪುಟದಿಂದ)** ಲೋಕಸಭಾ ಕ್ಷೇತ್ರದಿಂದ ನಾಮಪತ್ರ ತಿರಸ್ಕೃತಗೊಂಡಿದ್ದ ಸರಿತಾ ನಾಯರ್ ಎಂಬುವವರು ದಾಖಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಹೇಳಿಕೆ ನೀಡಿದೆ.

ಸೌರಫಲಕ ಪ್ರಕರಣದಲ್ಲಿ ಸಿಲುಕಿ ಶಿಕ್ಷೆಗೆ ಗುರಿಯಾಗಿದ್ದ ನಾಯರ್, ನಾಮಪತ್ರ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಮೇಲ್ಮನವಿ ನ್ಯಾಯಾಲಯ ಶಿಕ್ಷೆಯನ್ನು ಅಮಾನತ್ತುಗೊಳಿಸಿದ ಕ್ರಮವನ್ನು ತಡೆ ಎಂದು ಪರಿಗಣಿಸಲಾಗದು. ಶಿಕ್ಷೆ ಅಮಾನತ್ತಿನಲ್ಲಿರಿಸಿದರೆ ಅನರ್ಹತೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ವ್ಯಕ್ತಿಗಳ ಅನರ್ಹತೆ ಮುಂದುವರೆಯುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

## ಅಂಗನವಾಡಿ ಕಾರ್ಯಕರ್ತೆಯರ ಖಾಯಂ ಸಾಧ್ಯವಿಲ್ಲ

**(1ನೇ ಪುಟದಿಂದ)** ಮತ್ತು ಎಂ.ಪಿ.ಕುಮಾರಸ್ವಾಮಿ ಅವರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರ ದಿಂದ ಶೇ.60ರಷ್ಟು, ರಾಜ್ಯ ಸರ್ಕಾರದಿಂದ ಶೇ.40ರಷ್ಟು ಗೌರವ ಧನ ಪಾವತಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಅಂಗನವಾಡಿ ಕಾರ್ಯಕರ್ತೆ ಯರನ್ನು ಖಾಯಂಗೊಳಿಸುವ ವಿಚಾರ ಕೇಂದ್ರ ಸರ್ಕಾರಕ್ಕೆ ಬಿಟ್ಟದ್ದು, ಇದು ಒಂದು ರಾಜ್ಯಕ್ಕೆ ಸಂಬಂಧಿಸಿದ್ದಲ್ಲ. ಇಡೀ ರಾಷ್ಟ್ರಕ್ಕೇ ಅನ್ವಯವಾಗುವಂತೆ ಕಾನೂನು ತಂದು ಖಾಯಂಗೊಳಿಸುವ ನಿರ್ಧಾರವನ್ನು ಕೇಂದ್ರವೇ ಕೈಗೊಳ್ಳ ಬೇಕು. ಇದರಲ್ಲಿ ನಮ್ಮ ಪಾತ್ರವಿಲ್ಲ. ಆದರೆ, ಕಾರ್ಯಕರ್ತೆಯರಿಗೆ ನಾವು ಗೌರವ ಧನವನ್ನು ಹೆಚ್ಚಿಸಿದ್ದೇವೆ ಎಂದರು.

## ಕಾಂಗ್ರೆಸ್‌ಗೆ ಮುಖಭಂಗ

**(1ನೇ ಪುಟದಿಂದ)** 1,989ರಲ್ಲಿ ಗೆಲುವು ಸಾಧಿಸಿದೆ. ಕಾಂಗ್ರೆಸ್ 1,852ರಲ್ಲಿ ಗೆಲುವು ಕಂಡಿದೆ. ಸಿಪಿಐ (ಎಂ) 26, ಆರ್‌ಎಲ್‌ಪಿ 6 ಹಾಗೂ ಬಿಎಸ್‌ಪಿ ಐದು ಸ್ಥಾನಗಳಲ್ಲಿ ಗೆಲುವು ಕಂಡಿದೆ. ಸ್ವತಂತ್ರ ಅಭ್ಯರ್ಥಿಗಳು 439 ಸ್ಥಾನಗಳಲ್ಲಿ ಜಯ ಗಳಿಸಿದ್ದಾರೆ.

ಜಿಲ್ಲಾ ಪರಿಷತ್ ಹಂತದಲ್ಲಿ 635 ಕ್ಷೇತ್ರಗಳ ಪೈಕಿ ಬಿಜೆಪಿ 353 ಸ್ಥಾನ ಪಡೆದಿದೆ. ಕಾಂಗ್ರೆಸ್ 252ರಲ್ಲಿ ಗೆಲುವು ಕಂಡಿದೆ. ಒಂದು ಜಿಲ್ಲಾ ಪರಿಷತ್ ಚುನಾವಣೆಯ ಫಲಿತಾಂಶ ಇನ್ನೂ ಬರಬೇಕಿದೆ.

ರಾಜ್ಯದ 21 ಜಿಲ್ಲಾ ಪಂಚಾಯ್ತಿಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 14ರಲ್ಲಿ ಬಹುಮತ ಪಡೆದುಕೊಂಡಿದೆ. ಕಾಂಗ್ರೆಸ್ ಐದರಲ್ಲಿ ಗೆಲುವು ದಾಖಲಿಸಿದೆ. ರಾಜಸ್ಥಾನದ ರಾಜ್ಯಾಧ್ಯಕ್ಷ ಗೋವಿಂದ್ ಸಿಂಗ್ ದೊಸ್ತಾರಾ ಅವರ ತವರು ಜಿಲ್ಲೆಯಲ್ಲೇ ಕಾಂಗ್ರೆಸ್‌ಗೆ ಸೋಲು ಎದುರಾಗಿದೆ. ಹಲವಾರು ಸಚಿವರೂ ಸಹ ತಮ್ಮ ನೆಲೆಗಳಲ್ಲಿ ಪಕ್ಷಕ್ಕೆ ಗೆಲುವು ತಂದುಕೊಡಲು ವಿಫಲರಾಗಿದ್ದಾರೆ.

## ಮಸೂದೆಗೆ ವಿಧಾನಸಭೆ ಒಪ್ಪಿಗೆ

**(1ನೇ ಪುಟದಿಂದ)** ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಧ್ಯ ಪ್ರವೇಶಿಸಿ, ನಿಯಮಗಳ ಅನುಸಾರ ಪಾಟೀಲ್ ಪ್ರಸ್ತಾಪಿಸಿರುವ ತಿದ್ದುಪಡಿಗಳಿಗೆ ಅವಕಾಶ ಇಲ್ಲ ಎಂದರು. ಕಳೆದ ಮುಂಗಾರು ಅಧಿವೇಶನದಲ್ಲೇ ವಿಧಾನಸಭೆಯಲ್ಲಿ ಮಸೂದೆಗೆ ಅಂಗೀಕಾರ ನೀಡಲಾಗಿತ್ತು. ಆದರೆ, ಪರಿಷತ್ತಿನಲ್ಲಿ ಕೆಲ ತಿದ್ದುಪಡಿಗಳನ್ನು ತಂದ ಕಾರಣ ಮತ್ತೊಮ್ಮೆ ವಿಧಾನಸಭೆಯಲ್ಲಿ ಅಂಗೀಕಾರ ಪಡೆಯಲಾಗಿದೆ.

## ನಗರದಲ್ಲಿ ಇಂದು ಸಿಪಿಐ ಸಭೆ

ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ವತಿಯಿಂದ ಗ್ರಾಮ ಪಂಚಾಯತಿ ಚುನಾವಣೆ ನಿಮಿತ್ತ ಸಭೆಯು ಇಂದು 11 ಗಂಟೆಗೆ ಕಾಂ. ಪಂಪಾಪತಿ ಭವನದಲ್ಲಿ ನಡೆಯಲಿದೆ.

ಪಕ್ಷದ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್ ರವರು ಉದ್ಘಾಟಿಸುವರು. ಜಿಲ್ಲಾ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ, ಜಿಲ್ಲಾ ಖಜಾಂಚಿ ಆನಂದರಾಜ್, ಆವರಗೆರೆ ಚಂದ್ರು, ಹೆಚ್.ಜಿ. ಉಮೇಶ್, ಮಹಮದ್ ಬಾಷಾ, ಮಹಮ್ಮದ್ ರಫೀಕ್, ಟಿ.ಎಚ್. ನಾಗರಾಜ್ ಸೇರಿದಂತೆ ಇನ್ನಿತರರು ಭಾಗವಹಿಸುವರು ಎಂದು ಪಕ್ಷದ ತಾಲ್ಲೂಕು ಕಾರ್ಯದರ್ಶಿ ಆವರಗೆರೆ ವಾಸು ತಿಳಿಸಿದ್ದಾರೆ.

## ಪ್ರಸ್ತಾವನೆ ತಿರಸ್ಕರಿಸಿದ ರೈತರು

**(1ನೇ ಪುಟದಿಂದ)** ಜಾರಿಗೆ ತರಲಾದ ನೂತನ ಕೃಷಿ ಕಾಯ್ದೆಗಳ ಕುರಿತ ಎಲ್ಲ ಕಳವಳಗಳಿಗೆ ಸ್ಪಷ್ಟನೆ ನೀಡಲು ಸಿದ್ಧವಿರುವುದಾಗಿಯೂ ಸರ್ಕಾರ ಹೇಳಿದೆ. ಆದರೆ, ಕಾಯ್ದೆಗಳನ್ನು ವಾಪಸ್ ಪಡೆಯುವ ಬಗ್ಗೆ ಸರ್ಕಾರ ಯಾವುದೇ ಹೇಳಿಕೆ ನೀಡಿಲ್ಲ.

ಅಂಬಾನಿ ಹಾಗೂ ಅದಾನಿ ಔದ್ಯಮಿಕ ಸಮೂಹಗಳಿಗೆ ಸೇರಿದ ಉತ್ಪನ್ನಗಳಿಗೆ ಬಹಿಷ್ಕಾರ ಹಾಕಲಾಗುವುದು ಎಂದು ಇನ್ನೋರ್ವ ರೈತ ಮುಖಂಡ ಜಂಗ್ವೀರ್ ಸಿಂಗ್ ಹೇಳಿದ್ದಾರೆ. ಜಿಯೋ ಸಿಮ್ ಕಾರ್ಡ್‌ಗಳಿಗೆ ಬಹಿಷ್ಕಾರ ಹಾಕುವುದಾಗಿ ಹೇಳಿರುವ ಅವರು, ಜನರು ಈ ಸಿಮ್‌ಗಳಿಂದ ಪೋರ್ಟ್ ಆಗಬೇಕೆಂದು ಕರೆ ನೀಡಿದ್ದಾರೆ.

ರೈತ ಮುಖಂಡರು ಪ್ರಸ್ತಾವನೆಗಳನ್ನು ತಿರಸ್ಕರಿಸಿದ ನಂತರ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಗೃಹ ಸಚಿವ ಅಮಿತ್ ಷಾ ಭೇಟಿ ಮಾಡಿ ಮುಂದಿನ ಕ್ರಮಗಳ ಕುರಿತು ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

## ವಿಪಕ್ಷಗಳ ಮನವಿ

**(1ನೇ ಪುಟದಿಂದ)** ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ನಾವು ಕೇಳಿದ್ದೇವೆ ಎಂದು ಭೇಟಿಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ರಾಹುಲ್ ಗಾಂಧಿ ಹೇಳಿದ್ದಾರೆ.

ಸಂಸತ್ತಿನಲ್ಲಿ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದ ರೀತಿಯು ರೈತರಿಗೆ ಮಾಡಿದ ಅವಮಾನ. ಹೀಗಾಗಿಯೇ ಅವರು ಚಳಿಯ ನಡುವೆಯೂ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಕೃಷಿ ಕಾಯ್ದೆಗಳ ಕುರಿತು ಸಂಬಂಧಿಸಿದವರ ಜೊತೆಗಾಗಲೀ, ಸಂಸದೀಯ ಸಮಿತಿಯಲ್ಲಾಗಲೀ ಚರ್ಚಿಸಿಲ್ಲ. ಹೀಗಾಗಿ ಇವುಗಳನ್ನು ವಾಪಸ್ ಪಡೆಯುವಂತೆ ಎನ್.ಸಿ.ಪಿ. ನಾಯಕ ಪವಾರ್ ಹೇಳಿದ್ದಾರೆ.

ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ಸಂಸತ್ತಿನಲ್ಲಿ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ. ಇವುಗಳನ್ನು ವಾಪಸ್ ಪಡೆಯುವಂತೆ ಕೇಳಿದ್ದೇವೆ ಎಂದು ಯೆಚೂರಿ ಹೇಳಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಪ್ರತಿಪಕ್ಷಗಳ ನಿಯೋಗವನ್ನು ಐವರಿಗೆ ಸೀಮಿತಗೊಳಿಸಲಾಗಿತ್ತು.

## ಗಾಂಧಿನಗರದಲ್ಲಿ ಸಾಮೂಹಿಕ ಕಲ್ಯಾಣ

ದಾವಣಗೆರೆ, ಡಿ.9- ಇಲ್ಲಿನ ಗಾಂಧಿನಗರ ಶ್ರೀ ಗುರು ರಾಮದಾಸ ಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್ ವತಿಯಿಂದ ಇದೇ ದಿನಾಂಕ 28 ರಂದು 31ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವ ಏರ್ಪಡಿಸಲಾಗಿದೆ.

ಇದೇ ಸಂದರ್ಭದಲ್ಲಿ 31 ವರ್ಷದ ಶ್ರೀ ಗುರು ಮಾದಾರ ಚನ್ನಯ್ಯ ಸ್ವಾಮಿಗಳ ಜಯಂತ್ಯುತ್ಸವ, ಶ್ರೀ ಗುರು ರಾಮದಾಸ್ ಸ್ವಾಮಿಗಳ 65ನೇ ವರ್ಷದ ಮತ್ತು ಶ್ರೀ ಮಲ್ಲಯ್ಯ ಸ್ವಾಮಿಗಳ 20ನೇ ವರ್ಷದ ಮತ್ತು ಶ್ರೀ ಕೊಂಡಯ್ಯ ಸ್ವಾಮಿಗಳ 16ನೇ ವರ್ಷದ ಪುಣ್ಯಾರಾಧನೆ ಕೂಡ ನಡೆಯಲಿದೆ.

ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಧು-ವರರಿಗೆ ತಾಳಿ, ರವಿಕೆ, ಸೀರೆ, ಪಂಚೆ ಹಾಗೂ ಉಡುಗೊರೆಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಬಿ.ಹೆಚ್. ವೀರಭದ್ರಪ್ಪ (99863 28748), ಬಿ.ಎಂ. ರಾಮಸ್ವಾಮಿ (99002 63111) ತಿಳಿಸಿದ್ದಾರೆ.

## ಹರಿಹರ ತಾ.ಪಂ. ಸ್ಥಾಯಿ ಸಮಿತಿ ಸ್ಥಾನಕ್ಕೆ ಆದಾಪುರ ವೀರಭದ್ರಪ್ಪ ರಾಜೀನಾಮೆ



ಹರಿಹರ, ಡಿ.9- ತಾಲ್ಲೂಕು ಪಂಚಾಯತಿ ಸ್ಥಾಯಿ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಆದಾಪುರದ ವೀರ ಭದ್ರಪ್ಪ ಅವರು ರಾಜೀನಾಮೆಯನ್ನು ತಾಪಂ ಅಧ್ಯಕ್ಷರಾದ ಶ್ರೀದೇವಿ ಮಂಜಪ್ಪ ಅವರಿಗೆ ನೀಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಶಾಂತಮ್ಮ ಗದಿಗೆಪ್ಪ, ತಾಪಂ ಸದಸ್ಯರಾದ ಕೊಟ್ರೇಶಪ್ಪ ಸಿರಿಗೆರೆ, ಮಾಜಿ ಉಪಾಧ್ಯಕ್ಷೆ ಜಯಮ್ಮ ಬಸವಲಿಂಗಪ್ಪ ಲಕ್ಷ್ಮಿ ಮಹಾಂತೇಶ್, ಬಸವಲಿಂಗಪ್ಪ ಹಾಗೂ ಇತರರು ಹಾಜರಿದ್ದರು.


## ಗೋ ಹತ್ಯೆ ನಿಷೇಧ ದಿನಾಚರಣೆ

ಬಿಜೆಪಿಯ ಸೂಚನೆಯ ಮೇರೆಗೆ ಎಲ್ಲಾ ಮಂಡಲಗಳಲ್ಲಿ ಗೋ ಪೂಜೆ ಮಾಡುವುದರ ಮೂಲಕ ಗೋಹತ್ಯೆಯನ್ನು ನಿಷೇಧಿಸುವ ಕಾನೂನಿಗೆ ಬೆಂಬ ಲಾರ್ಥವಾಗಿ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ರಿಂದ 11.30 ರ ಒಳಗಾಗಿ ನಡೆಸಬೇಕು ಎಂದು ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ತಿಳಿಸಿದ್ದಾರೆ.

# ಕೊರೊನಾ ಮೀರಿಸಿದ ಕ್ರಿಕೆಟ್ ಪ್ರೇಮ

### 2020ರಲ್ಲಿ ಕೊರೊನಾಗಿಂತ ಐಪಿಎಲ್ ಕುರಿತೇ ಹೆಚ್ಚು ಗೂಗಲ್ ಶೋಧ

ನವದೆಹಲಿ, ಡಿ. 9 – ಕೊರೊನಾ ವೈರಸ್‌ನಿಂದ ಇಡೀ ದೇಶವೇ 2020ರಲ್ಲಿ ಬಾಧಿತವಾಗಿರಬಹುದು. ಆದರೆ, ಗೂಗಲ್‌ನಲ್ಲಿ ಮಾತ್ರ ಭಾರತೀಯರು ಕ್ರಿಕೆಟ್ ಪ್ರೇಮ ಮೆರೆದಿದ್ದಾರೆ. 2020ರಲ್ಲಿ ಗೂಗಲ್‌ನಲ್ಲಿ ಅತಿ ಹೆಚ್ಚು ಶೋಧಕ್ಕೆ ಒಳಗಾಗಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಾಗಿದೆ.




ಗೂಗಲ್ ಇಂಡಿಯಾ ತನ್ನ 2020ರ ಶೋಧನಾ ವಿವರಗಳನ್ನು ಬಿಡುಗಡೆ ಮಾಡಿದ್ದು, ಅದರ ಪ್ರಕಾರ ಈ ವರ್ಷ ಐ.ಸಿ.ಸಿ. ಕ್ರಿಕೆಟ್ ವಿಶ್ವ ಕಪ್ ಕುರಿತು ಅತಿ ಹೆಚ್ಚು ಜನರು ಶೋಧಿಸಿದ್ದಾರೆ.

ನಂತರದ ಸ್ಥಾನದಲ್ಲಿ ಕೊರೊನಾ ವೈರಸ್ ಇದೆ. ಅಮೆರಿಕದ ಚುನಾವಣೆ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ, ಬಿಹಾರ ಚುನಾವಣೆ ಹಾಗೂ ದೆಹಲಿ ಚುನಾವಣೆಗಳು ಇಡೀ ವರ್ಷ ಗೂಗಲ್‌ನಲ್ಲಿ ಪ್ರಚಲಿತವಾಗಿದ್ದವು.

ಕೊರೊನಾ ನಡುವೆ ಯುಎಇನಲ್ಲಿ ಸೆಪ್ಟೆಂಬರ್‌ನಿಂದ ಐಪಿಎಲ್ ಪಂದ್ಯಾವಳಿ ನಡೆಸಲಾಗಿತ್ತು. ಈ ಪಂದ್ಯಾವಳಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.28ರಷ್ಟು ಹೆಚ್ಚಿನ ಪ್ರೇಕ್ಷಕರನ್ನು ಪಡೆದುಕೊಂಡಿತ್ತು.

ವ್ಯಕ್ತಿಗಳ ಪೈಕಿ ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು ಅತಿ ಹೆಚ್ಚು ಶೋಧಕ್ಕೆ ಗುರಿಯಾಗಿದ್ದಾರೆ. ಮಹಾರಾಷ್ಟ್ರ ಪೊಲೀಸರ ಬಂಧನಕ್ಕೆ ಗುರಿಯಾಗಿದ್ದ ಪತ್ರಕರ್ತ ಅರ್ನಬ್ ಗೋಸ್ವಾಮಿ ನಂತರದ ಸ್ಥಾನದಲ್ಲಿದ್ದಾರೆ.

ಅತಿ ಹೆಚ್ಚು ಕುತೂಹಲದ ಪ್ರಶ್ನೆಗಳಲ್ಲಿ ಕೊರೊನಾ ವೈರಸ್ ಮೊದಲ ಸ್ಥಾನದಲ್ಲಿದೆ. 'ಕೊರೊನಾ ವೈರಸ್ ಅಂದರೆ ಏನು?' ಎಂಬ ಬಗ್ಗೆ ಅತಿ ಹೆಚ್ಚು ಜನರು ಶೋಧಿಸಿದ್ದಾರೆ. ಕೋವಿಡ್ 19, ಪ್ಲಾಸ್ಮಾ ಚಿಕಿತ್ಸೆಯ ಬಗ್ಗೆಯೂ ಹೆಚ್ಚು ಜನರು ಗೂಗಲ್‌ನಲ್ಲಿ ಹುಡುಕಿದ್ದಾರೆ.

# ದೂಡಾ ಆಸ್ತಿ ರಕ್ಷಿಸುವ ಕಾರ್ಯಕ್ಕೆ ಕೊನೆ ಇಲ್ಲ

**(1ನೇ ಪುಟದಿಂದ)** ಹಾಕಿದರು.

ಜಿಎಂಐಟಿಯಲ್ಲಿ ಇಂತಹ ಪ್ರಕರಣ ಇರಬಹುದೇ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಜಿಎಂಐಟಿ ಕಾಲೇಜು ಜಾಗ ದೂಡಾದಿಂದಾಗಲೀ, ಪಾಲಿಕೆಯಿಂದಾಗಲೀ ಪಡೆದಿದ್ದಲ್ಲ. ಹಿಂದೆ ಮುಖ್ಯಮಂತ್ರಿಯಾಗಿದ್ದ ಧರ್ಮಸಿಂಗ್ ಅವರ ಅವಧಿಯಲ್ಲಿ ಶೈಕ್ಷಣಿಕ ಉದ್ದೇಶಕ್ಕೆ ಅರ್ಜಿ ಸಲ್ಲಿಸಿದ್ದರಿಂದ ರಾಜ್ಯ ಸರ್ಕಾರವೇ ನೀಡಿದ್ದ ಜಾಗವಾಗಿದೆ. ಶೈಕ್ಷಣಿಕ ಉದ್ದೇಶಕ್ಕೆ ಪಡೆದ ಜಾಗವನ್ನು ಅದೇ ಉದ್ದೇಶಕ್ಕೆ ಸಂಸ್ಥೆಯವರು ಬಳಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಜಿಲ್ಲಾ ಕಚೇರಿಗೂ ಸಿಎ ಸೈಟ್ ನೀಡಲಾಗಿದೆ. ಅದನ್ನೇನೂ ನಾನು ಪ್ರಶ್ನಿಸಿಲ್ಲ ಎಂದು ಹೇಳಿದರು.

ದೂಡಾ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ದೂಡಾ ಆಸ್ತಿಯನ್ನು ರಕ್ಷಿಸುವಲ್ಲಿ ಕಾರ್ಯಪ್ರವೃತ್ತನಾಗಿದ್ದೇನೆ. ಮೊದಲ ಹಂತದಲ್ಲಿ ಬಾತಿ ಕೆರೆ ಬಳಿ ಲೇಔಟ್ ಆಗಿದ್ದ ನಾಲ್ಕು ಎಕರೆ ಜಾಗ, ಕುಂದುವಾಡ ಕೆರೆ ಬಳಿ ಮಾಜಿ ಸಚಿವರ ಸಂಬಂಧಿ ಅತಿಕ್ರಮಿಸಿದ್ದ ಎರಡು ಎಕರೆ ಜಾಗ, ಜಿಎಂಐಟಿ ಬಳಿ ವರ್ತುಲ ರಸ್ತೆ ಒತ್ತುವರಿ ಮಾಡಿ ಕಟ್ಟಿದ್ದ ಶಾದಿ ಮಹಲ್ ಕಟ್ಟಡದ ಭಾಗ ತೆರವು ಮಾಡಿಸಿದ್ದೇನೆ. ಇದು ಇಲ್ಲಿಗೆ ಕೊನೆಯಾಗುವುದಿಲ್ಲ. ಪ್ರಾಧಿಕಾರ ಅಧ್ಯಕ್ಷ ಸ್ಥಾನ ಇಲ್ಲದಿದ್ದರೆ ಒಬ್ಬ ಸಾಮಾನ್ಯ ಪ್ರಜೆಯಾಗಿ ಆರ್‌ಟಿಐನಡಿ ಮಾಹಿತಿ ಪಡೆದು, ಸರ್ಕಾರಿ ಆಸ್ತಿ ಉಳಿಸುವ ಹೋರಾಟ ನಡೆಸುವೆನೆಂದರು.

ಎಸ್.ಎಸ್. ಮಲ್ಲಿಕಾರ್ಜುನ್ ಅವರ ಅಧಿಕಾರದ ಅವಧಿಯಲ್ಲಿ ದಾವಣಗೆರೆಯಲ್ಲಿ ಅಭಿವೃದ್ಧಿ ಪರ್ವ ಆಗಿದೆ ಎಂದು ಕಾಂಗ್ರೆಸ್ ಮುಖಂಡರು ಹೇಳುತ್ತಾರೆ. ಹೀಗೆ ಅಭಿವೃದ್ಧಿ ಪರ್ವ ಕೈಗೊಂಡವರು ವಿಧಾನಸಭೆ, ಲೋಕಸಭೆ ಚುನಾವಣೆಗಳಲ್ಲಿ ಸೋತಿದ್ದು ಏಕೆಂದು ಪ್ರಶ್ನಿಸಿದರಲ್ಲದೇ, ಉತ್ತಮ ಸಿಸಿ ರಸ್ತೆ ಮಾಡಿದ್ದಕ್ಕೆ ನನ್ನ ಯಾವುದೇ ಆಕ್ಷೇಪ ಇಲ್ಲ. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಲೂಟಿ ಮಾಡಿದ್ದು, ಸರ್ಕಾರಿ ಜಾಗ ಕಬಳಿಸಿದ್ದಕ್ಕೆ ವಿರೋಧವಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಳೆದ 2017ರಲ್ಲಿ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಬಡ ಜನರಿಗೆ ನಿವೇಶನಗಳನ್ನು ನೀಡುವ ಉದ್ದೇಶದಿಂದ ಹಂಚಿಕೆ ಮಾಡಲಾಗಿತ್ತು. ಆದರೆ, ಕೆಲವು ಕೋಟ್ಯಾಧಿಪತಿಗಳು, ಸ್ಥಿತಿವಂತರಿಗೆ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದು ಬೆಳಕಿಗೆ ಬಂದಿದ್ದು, ಅಂತಹವರನ್ನು ಈಗ ಗುರುತು ಮಾಡಿದ್ದು, ಅವರ ಮೇಲೆ ಕ್ರಮ ಜರುಗಿಸಲಾಗುವುದು ಎಂದರು.

ನಗರ ಪಾಲಿಕೆ ಸದಸ್ಯರಾಗಿರುವ ದೇವರಮನೆ ಶಿವಕುಮಾರ್ ಅವರ ಸಹೋದರರಾದ ದೇವರಮನೆ ಮುರುಗೇಶ್, ದೇವರಮನೆ ಶಿವರಾಜ್ ಅವರುಗಳಿಗೆ 60x40 ಅಳತೆಯ ತಲಾ ಒಂದು ನಿವೇಶನವನ್ನು ವಿತರಣೆ ಮಾಡಲಾಗಿದೆ. ಈ ಆಯ್ಕೆ ಲಾಟರಿ ಮೂಲಕ ಮಾಡಿದ್ದು, ಇದರಲ್ಲಿ ಗೋಲ್‌ಮಾಲ್ ನಡೆದಿದೆ. ಈ ಬಗ್ಗೆ ತನಿಖೆ ನಡೆಸಲಾಗುವುದು. ದೇವರಮನೆ ಶಿವಕುಮಾರ್ ಅವರು ಪಡೆದಿರುವ ನಿವೇಶನಗಳನ್ನು ಗೌರವಯುತವಾಗಿ ದೂಡಾಗೆ ವಾಪಸ್ ನೀಡಲು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲವಾದಲ್ಲಿ ಕ್ರಿಮಿನಲ್ ಮೊಕದ್ದಮೆ ಹಾಕಲಾಗುವುದು ಎಂದರು.

ಕಾಂಗ್ರೆಸ್ ಮುಖಂಡರು ತಮ್ಮ ಆಡಳಿತಾವಧಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಹೇಳಿಕೆ ಕೊಡುತ್ತಾರೆ. ಆದರೆ, ಅವರದ್ದೇ ಪಕ್ಷದ ಮುಖಂಡರು ಇಂತಹ ಭ್ರಷ್ಟಾಚಾರ ನಡೆಸುತ್ತಾರೆ. ವಿನಾ ಕಾರಣ ನಮ್ಮ ಮೇಲೆ ಆರೋಪ ಮಾಡುತ್ತಾರೆ. ಅದಕ್ಕೆ ಅವರ ಆರೋಪಕ್ಕೆ ದಾಖಲೆಯೊಂದಿಗೆ ಭ್ರಷ್ಟಾಚಾರ ಬಿಡುಗಡೆ ಮಾಡುತ್ತಿದ್ದೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದೂಡಾ ಸದಸ್ಯರಾದ ರುದ್ರೇಶ್, ಸೌಭಾಗ್ಯ ಮುಕುಂದ, ರಾಜು ರೋಖಡೆ ಸೇರಿದಂತೆ ಇತರರು ಇದ್ದರು.

**ತಾತ್ಕಾಲಿಕ ಪುನರ್ ವಸತಿ ಕಲ್ಪಿಸಿಲ್ಲ:** ಸರ್ ಮಿರ್ಜಾ ಇಸ್ಮಾಯಿಲ್ ನಗರದಲ್ಲಿ ಹಾದು ಹೋಗಿರುವ ವರ್ತುಲ ರಸ್ತೆಯ ಅಭಿವೃದ್ಧಿ ಸಲುವಾಗಿ ಆ ಸ್ಥಳದಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವ ನಿವಾಸಿಗಳ ಸ್ಥಳಾಂತರಕ್ಕಾಗಿ ದೂಡಾದಿಂದ ತಾತ್ಕಾಲಿಕ ಪುನರ್ ವಸತಿ ಕಾಮಗಾರಿ ಕೈಗೊಳ್ಳಲು 1 ಕೋಟಿ 50 ಲಕ್ಷ ರೂ. ಅನುದಾನವನ್ನು ನಿರ್ಮಿತಿ ಕೇಂದ್ರಕ್ಕೆ ಬಿಡುಗಡೆಗೊಳಿಸಲು ಮಾರ್ಚ್ 5, 2017ರಂದು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅಂತೆಯೇ ಅನುದಾನವನ್ನು ಅನುಮೋದನೆಯ ನಿರೀಕ್ಷಣೆ ಮೇರೆಗೆ ನಿರ್ಮಿತಿ ಕೇಂದ್ರಕ್ಕೆ ಅಕ್ಟೋಬರ್ 31, 2017ರಂದು 1 ಕೋಟಿ 25 ಲಕ್ಷ ರೂ. ಪ್ರಾಧಿಕಾರದಿಂದ ಬಿಡುಗಡೆಯಾಗಿದ್ದರೂ, ಆ ಜಾಗದಲ್ಲಿ ಯಾವುದೇ ತಾತ್ಕಾಲಿಕ ಶೆಡ್ ನಿರ್ಮಾಣವಾಗಿಲ್ಲ ಎಂದು ಶಿವಕುಮಾರ್ ಆಪಾದಿಸಿದರು.

ಕಾಮಗಾರಿ ಪೂರ್ಣಗೊಳಿಸಿ ನಗರ ಪಾಲಿಕೆಗೆ ಹಸ್ತಾಂತರಿಸಿ, ಆ ಬಗ್ಗೆ ಪ್ರಾಧಿಕಾರಕ್ಕೆ ವರದಿ ನೀಡುವಂತೆ ಅನೇಕ ಬಾರಿ ಸೂಚಿಸಿದ್ದರೂ ಸಹ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರು ಇನ್ನೂ ಯಾವುದೇ ಮಾಹಿತಿ ನೀಡಿಲ್ಲ. ಸದರಿ ಸ್ಥಳದಲ್ಲಿ ಯಾವುದೇ ಕಾಮಗಾರಿ ನಡೆದಿಲ್ಲದಿರುವ ಬಗ್ಗೆ ನವೆಂಬರ್ 17,2020ರಂದು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿದ್ದು, ಪ್ರಾಧಿಕಾರ ಮತ್ತು ಪಾಲಿಕೆ ಅಭಿಯಂತರರು ಜಂಟಿಯಾಗಿ ಸ್ಥಳ ಪರಿಶೀಲಿಸಿ, ವರದಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದರು.

ಈ ವಿಚಾರವಾಗಿ ಮಾಧ್ಯಮ ಪ್ರತಿನಿಧಿಗಳನ್ನು ಸ್ಥಳಕ್ಕೆ ಕರೆದೊಯ್ದು ತಾತ್ಕಾಲಿಕ ಪುನರ್ ವಸತಿ ಕಾಮಗಾರಿ ನಡೆಯದ ಬಗ್ಗೆ ಸಾಕ್ಷಿಯಾಗಿ ಕಣ್ಣೆದುರು ಸಾಬೀತುಪಡಿಸಿದ್ದಾರೆ.

## ಭ್ರಷ್ಟಾಚಾರ ಜಂಟಿ ಸದನ ಸಮಿತಿ ತನಿಖೆ: ಸಿಎಂ

**(1ನೇ ಪುಟದಿಂದ)** ಹೀಗಾಗಿ ತ್ವರಿತವಾಗಿ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಪ್ರಕಟಿಸಿದರು. ಇದಕ್ಕೂ ಮುನ್ನ ಸಚಿವರು ಶೇ.70ರಷ್ಟು ನೀರಿನ ಘಟಕಗಳು ಸಮರ್ಪಕವಾಗಿವೆ. ಶೇ.4ರಷ್ಟು ಮಾತ್ರ ಹಾಳಾಗಿವೆ. ಇನ್ನೂ ಶೇ.26ರಷ್ಟು ದುರಸ್ತಿ ಮಾಡಬಹುದು ಎಂಬ ಬಗ್ಗೆ ಇಲಾಖೆ ನೇಮಕ ಮಾಡಿದ್ದ ಸಮಿತಿಯೊಂದು ಘಟಕಗಳನ್ನು ಪರಿಶೀಲಿಸಿ ವರದಿ ನೀಡಿದೆ ಎಂದರು.

ಸಚಿವರ ಹೇಳಿಕೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನಾಡಗೌಡ ಮತ್ತು ಯತ್ನಾಳ್ ನಾವೇ ಕೇವಲ ನಾಲ್ಕು ಲಕ್ಷ ರೂ.ಗಳಲ್ಲಿ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದ್ದು, ಸಂಬಂಧಿಸಿದ ಸಂಸ್ಥೆ ಎರಡು ವರ್ಷಗಳ ಕಾಲ ನಿರ್ವಹಣೆ ಮಾಡುತ್ತಿದೆ. ಆದರೆ, ಸರ್ಕಾರ 16-18 ಲಕ್ಷ ರೂ ಗಳಷ್ಟು ಪಾವತಿಸಿ ಘಟಕಗಳನ್ನು ಸ್ಥಾಪಿಸಿದೆ. ಬಹುತೇಕ ಅವೆಲ್ಲವೂ ಮ್ಯೂಸಿಯಂ ಆಗಿ ಪರಿವರ್ತನೆಗೊಂಡಿವೆ. ಇದರಲ್ಲಿ ದೊಡ್ಡ ಭ್ರಷ್ಟಾಚಾರವಾಗಿದೆ ಎಂದು ಆರೋಪಿಸಿದರು.

ಸಚಿವರಾಗುವ ಮುನ್ನ ಈ ಬಗ್ಗೆ ತನಿಖೆ ಆಗಬೇಕು ಎನ್ನುತ್ತಿದ್ದೀರಿ. ಈಗೇನು ಮಾಡುತ್ತಿದ್ದೀರಿ ಎಂದು ಈಶ್ವರಪ್ಪ ಅವರನ್ನು ಕೆಣಕಿದರು. ಇದಕ್ಕೆ ಸ್ಪಂದಿಸಿದ ಬಹುತೇಕ ಶಾಸಕರು, ತಮ್ಮ ಕ್ಷೇತ್ರದಲ್ಲಿನ ಘಟಕಗಳ ಪರಿಸ್ಥಿತಿಯನ್ನು ಎಳೆಎಳೆಯಾಗಿ ಬಿಡಿಸುತ್ತಿದ್ದಂತೆ, ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿ ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಹೇಳಿದರು. ಸ್ವಲ್ಪ ಸಮಯದ ನಂತರ ಮತ್ತೆ ಮುಖ್ಯಮಂತ್ರಿ ಅವರು, ಜಂಟಿ ಸದನ ಸಮಿತಿ ಮೂಲಕವೇ ತನಿಖೆಗೆ ಆದೇಶಿಸಿದರು.

## ಉಪಾಧ್ಯಕ್ಷರಾಗಿ ಶೇಖರಪ್ಪ

**(1ನೇ ಪುಟದಿಂದ)** ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಆರ್. ಷಣ್ಮುಖಪ್ಪ, ನಿರ್ದೇಶಕರುಗಳಾದ ಬಿ.ವಿ. ಚಂದ್ರಶೇಖರ್, ಜೆ.ಎಸ್. ವೇಣುಗೋಪಾಲ ರೆಡ್ಡಿ, ಕೆ.ಹೆಚ್. ಷಣ್ಮುಖಪ್ಪ, ಆರ್.ಜಿ. ಶ್ರೀನಿವಾಸ ಮೂರ್ತಿ, ಬಿ.ಹಾಲೇಶಪ್ಪ, ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ ಗೋಪನಾಳ್ ಹೆಚ್.ಕೆ. ಪಾಲಾಕ್ಷಪ್ಪ, ಸರ್ಕಾರದ ಪ್ರತಿನಿಧಿ ಜೀವನ ಪ್ರಕಾಶ್, ಸಹಕಾರ ಸಂಘಗಳ ಉಪ ನಿಬಂಧಕ ಬಿ.ಜಯಪ್ರಕಾಶ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಹೆಚ್.ಲಕ್ಷ್ಮಣ್ ಅವರುಗಳು ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಿದ್ದರು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಬಿ.ಟಿ. ಕುಮಾರಸ್ವಾಮಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

## ಕಾರ್ತಿಕ್ ವೀರಶೈವ ಸಭಾ ಕಾರ್ಯದರ್ಶಿ



ದಾವಣಗೆರೆ, ಡಿ.9- ಅಖಿಲ ಭಾರತ ವೀರಶೈವ ಮಹಾಸಭಾದ ನಗರ ಘಟಕದ ಕಾರ್ಯದರ್ಶಿಯಾಗಿ ಕಾರ್ತಿಕ್ ಹಿರೇಮಠ್ ನೇಮಕಗೊಂಡಿದ್ದಾರೆ.

**ಸದಸ್ಯರ ಗಮನಕ್ಕೆ**

**ಎನ್.ಟಿ.ಪಿ. ಶ್ರೀನಿತ್ಯ ಸೌಹಾರ್ದ ಕೋ-ಆಪರೇಟಿವ್ ಲಿಮಿಟೆಡ್**

**ದಾವಣಗೆರೆ ಇದರ 2020-21 ರಿಂದ 2024-25ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಸಾಮಾನ್ಯ ಚುನಾವಣೆ ದಿನಾಂಕ 20.12.2020ರಂದು ಜರುಗಲಿದೆ. ನಾಮಪತ್ರ ಸಲ್ಲಿಕೆಗೆ ದಿನಾಂಕ 12.12.2020ರ ಮಧ್ಯಾಹ್ನ 3 ಗಂಟೆಯವರೆಗೆ ಅಂತಿಮ ದಿನವಾಗಿದೆ. ಹೆಚ್ಚಿನ ವಿವರಕ್ಕೆ ಅರ್ಹ ಮತದಾರ ಸದಸ್ಯರು/ ಆಕಾಂಕ್ಷಿಗಳು ಸಹಕಾರಿಯನ್ನು ಸಂಪರ್ಕಿಸಬೇಕಾಗಿ ಸೂಚಿಸಿದೆ.**

ಪ್ರಧಾನ ಕಛೇರಿ : 26731ಎ, ಎಸ್.ಐ. ಆರ್ಕೇಡ್, ಮೊದಲನೇ ಮಹಡಿ, ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ-4.

**ಮೊ. 08192-220588, ಮೊ. 96638 13674, 96638 13675**

**ಸಾರ್ವಜನಿಕ ನೋಟೀಸ್**

ನಮ್ಮ ಕಕ್ಷಿದಾರರಾದ **ಶ್ರೀ ಎನ್. ಮಹೇಶ್ವರಪ್ಪ ಬಿನ್ ಹೊನ್ನೂರಪ್ಪ ನೀಲಪ್ಪ ಮತ್ತು ಶ್ರೀ ಮಹಾಂತೇಶ ಬಿನ್ ಎನ್. ಮಹೇಶ್ವರಪ್ಪ, ಕುಂಬಾರಪೇಟೆ,** ದಾವಣಗೆರೆ. ಆದ ಇವರುಗಳು ನೀಡಿರುವ ಮಾಹಿತಿ ಮೇರೆಗೆ ನಾನು ನೀಡುತ್ತಿರುವ ಸಾರ್ವಜನಿಕ ನೋಟೀಸ್ ಏನೆಂದರೆ, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಯರಗುಂಟೆ ಗ್ರಾಮ ಪಂಚಾಯ್ತಿಗೆ ಸೇರಿದ ದೊಡ್ಡ ಬೂದಿಹಾಳ್ ಗ್ರಾಮದ ಆಸ್ತಿ ನಂ. 67/1ಎ ಖಾತೆ ನಂ. 101/ಬಿ ರಲ್ಲಿ ಸೈಟ್ ನಂ. 30 ರಿಂದ 39 ಮತ್ತು ಸೈಟ್ ನಂ. 40 ರಿಂದ 52 ಮತ್ತು ಸೈಟ್ ನಂ. 1 ರಿಂದ 23 ಉಳ್ಳ ಪ್ರತಿಯೊಂದು ಸೈಟ್‌ಗಳ ಅಳತೆ 15x40 ಉಳ್ಳ, ಒಟ್ಟು 46 ಖಾಲಿ ನಿವೇಶನಗಳನ್ನು ಮಾರಾಟ, ವಗೈರೆ ಮಾಡಲು ಮೇಲ್ಕಂಡ ನನ್ನ ಕಕ್ಷಿದಾರರು ದಿನಾಂಕ : 31.03.1998 ರಂದು ದಾವಣಗೆರೆ ನೋಟರಿಯವರ ಸಮಕ್ಷಮ ಜನರಲ್ ಪವರ್ ಆಫ್ ಅಟಾರ್ನಿ ಪತ್ರದ ಮೂಲಕ ದಾವಣಗೆರೆ ಸಿಟಿ ವಿದ್ಯಾನಗರ, ವಿನಾಯಕ ಬಡಾವಣೆ, 3ನೇ ಅಡ್ಡ ರಸ್ತೆ, ಡೋರ್ ನಂ. 1848/3 ರಲ್ಲಿ ವಾಸವಾಗಿರುವ ಕೆ. ನಾರಾಯಣ ಬಿನ್ ಕೆ. ಶ್ರೀನಿವಾಸ್ ಇವರಿಗೆ ಅಧಿಕಾರ ನೀಡಿರುವುದು ಸರಿಯಷ್ಟೆ. ಸದರಿ ಅಧಿಕಾರವನ್ನು ಪಡೆದ ಕೆ. ನಾರಾಯಣ ಇವರಿಗೆ ಸದರಿ ಮೇಲ್ಕಂಡ ನಿವೇಶನಗಳ ಮಾರಾಟ ವಗೈರೆ ಮಾಡದಂತೆ ಮೌಖಿಕವಾಗಿ ತಿಳಿಸಿ, ಎಚ್ಚರಿಕೆ ನೀಡಿರುತ್ತದೆ. ಆದರೂ ಸಹ ಸದರಿ ಕೆ. ನಾರಾಯಣ ಇವರು ತಮಗೆ ನೀಡಿದ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಹಲವು ನಿವೇಶನಗಳನ್ನು ಮಾರಾಟ ಮಾಡಿರುವುದು ನಮಗೆ ತಿಳಿದು ಬಂದಿರುತ್ತದೆ. ಈಗ ಸದರಿಯವರಿಗೆ ನೋಟೀಸ್ ನೀಡುವುದರ ಮೂಲಕ ಅಧಿಕಾರ ನೀಡಿದ ಜಿ.ಪಿ.ಎ. ಪತ್ರವನ್ನು ರದ್ದುಪಡಿಸಲಾಗಿರುತ್ತದೆ. ಆದ್ದರಿಂದ ಸಾರ್ವಜನಿಕರಲ್ಲಿ ಈ ಮೂಲಕ ತಿಳಿಸುವುದೇನೆಂದರೆ ಮೇಲ್ಕಂಡ ನಿವೇಶನಗಳ ವಿಚಾರವಾಗಿ ಇನ್ನು ಮುಂದೆ ಕೆ. ನಾರಾಯಣ ಇವರ ಮೂಲಕ ಯಾವುದೇ ರೀತಿಯಾಗಿ ವ್ಯವಹರಿಸಬಾರದಾಗಿ ತಿಳಿಸಲಾಗಿರುತ್ತದೆ. ಒಂದು ವೇಳೆ ಮೇಲ್ಕಂಡ ನಿವೇಶನಗಳ ವಿಚಾರವಾಗಿ ಸಾರ್ವಜನಿಕರು ಯಾರಾದರೂ ಕ್ರಯ ವಗೈರೆ ವ್ಯವಹಾರಗಳನ್ನು ಮಾಡಿದಲ್ಲಿ ಅದಕ್ಕೆ ಅವರುಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ. ಹಾಗೂ ಮೇಲ್ಕಂಡ ನಿವೇಶನಗಳ ವಿಚಾರವಾಗಿ ಯಾವುದೇ ರೀತಿಯ ವ್ಯವಹಾರಗಳನ್ನು ಕೆ. ನಾರಾಯಣ ಇವರೊಂದಿಗೆ ಮಾಡದಂತೆ ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.

ದಾವಣಗೆರೆ.

ಸಹಿ/- ವಕೀಲರು,
**ಮಾಲತೇಶ ಸಿ.** 97412 51557

**ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿ.,**

**# 2688/2, 'ಕರಾವಳಿ ಸೌಧ', ಡಾ. ಶ್ಯಾಮಸುಂದರ ಶೆಟ್ಟಿ ಬಂಟರ ಭವನದ ಹತ್ತಿರ, ಕುಂದುವಾಡ ರಸ್ತೆ, ದಾವಣಗೆರೆ - 577 006. ದೂರವಾಣಿ : 296156**

**20ನೇ ವಾರ್ಷಿಕ ಮಹಾಸಭೆಯ ನೋಟೀಸು**

ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ದಾವಣಗೆರೆ ಇದರ **20ನೇ ವಾರ್ಷಿಕ ಮಹಾಸಭೆಯನ್ನು** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಿ 43, ಸಿ.ಎಲ್.ಎಂ. 2020 (ಇ) ಆದೇಶದಂತೆ **ದಿನಾಂಕ 12.12.2020ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೀಟಿಂಗ್ ಮೂಲಕ ಝೂಮ್ ವಿಡಿಯೋ ವೆಬಿನಾರ್ ತಂತ್ರಜ್ಞಾನವನ್ನು ಬಳಸಿಕೊಂಡು ವಾರ್ಷಿಕ ಮಹಾಸಭೆ**ಯನ್ನು ಕರೆಯಲಾಗಿದೆ.

ಮಾನ್ಯ ಸದಸ್ಯರುಗಳು ಸಹಕಾರಿಗೆ ಭೇಟಿ ನೀಡಿ, ತಮ್ಮ ಮೊಬೈಲ್ ಸಂಖ್ಯೆಯನ್ನು ಸಹಕಾರಿಯಲ್ಲಿ ನೋಂದಾಯಿಸಿಕೊಳ್ಳಲು ವಿನಂತಿ. ನೀವು ನಮೂದಿಸಿದ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್./ವಾಟ್ಸಾಪ್ ಮೂಲಕ ಲಿಂಕ್‌ನ್ನು ಕಳುಹಿಸಲಾಗುವುದು. ಈ ಮೂಲಕ ತಾವುಗಳು ನಮ್ಮ ಸಹಕಾರಿಯ ಅಂತರ್ಜಾಲದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ವಿನಂತಿಸಲಾಗಿದೆ.

ಈಗಾಗಲೇ ವಾರ್ಷಿಕ ವರದಿಯನ್ನು ಕಳುಹಿಸಲಾಗಿದ್ದು, ಒಂದು ವೇಳೆ ನೋಟೀಸು ತಲುಪದ ಅರ್ಹ ಸದಸ್ಯರು ಈ ಪ್ರಕಟಣೆಯನ್ನೇ ವಾರ್ಷಿಕ ಮಹಾಸಭೆಯ ನೋಟೀಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

ಸ್ಥಳ : ದಾವಣಗೆರೆ
ದಿನಾಂಕ : 09-12-2020

| ಸಹಿ/- | ಸಹಿ/- | ಸಹಿ/- |
|---|---|---|
| **ಸಿ.ಎ. ಉಮೇಶ್ ಶೆಟ್ಟಿ** | **ಮಹೇಶ್ ಆರ್. ಶೆಟ್ಟಿ** | **ಖಲೀಲ್ ಅಹ್ಮದ್** |
| ಅಧ್ಯಕ್ಷರು | ಉಪಾಧ್ಯಕ್ಷರು | ಮುಖ್ಯ ಕಾರ್ಯನಿರ್ವಹಣಾಧಿಕಾರಿ |

|| ಶ್ರೀ ಜಗದ್ಗುರು ಪಂಚಾಚಾರ್ಯ ಪ್ರಸೀದಂತು || ಸ್ಥಾಪನೆ : 1996

**ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಡೋ. ನಂ. 683/2, 8ನೇ ಮುಖ್ಯ ರಸ್ತೆ, ಪಿ. ಜೆ. ಬಡಾವಣೆ, ದಾವಣಗೆರೆ. ಫೋ. : 239693

**2019-20ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟೀಸು**

ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ ಇದರ **2019-20ನೇ ಸಾಲಿನ 24ನೇ ಸರ್ವ ಸದಸ್ಯರ ಸಭೆಯನ್ನು** ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ **ವರ್ಚ್ಯುವಲ್ ಮೀಟಿಂಗ್ ಮುಖಾಂತರ ಸರ್ವಸದಸ್ಯರ ಸಭೆಯನ್ನು ದಿನಾಂಕ 23.12.2020ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ.**

ಈ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಇಚ್ಚಿಸುವ ಸಹಕಾರಿಯ ಸದಸ್ಯರು ತಮ್ಮ ಸದಸ್ಯತ್ವ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ನೋಂದಾಯಿಸುವ ಅವಶ್ಯಕತೆ ಇದ್ದು, ದಿನಾಂಕ 21.12.2020ರ ಸೋಮವಾರ ಸಂಜೆ 4.30 ರೊಳಗಾಗಿ ತಾವುಗಳು ಸೊಸೈಟಿಯ ಕಚೇರಿಗೆ ಸಂಪರ್ಕಿಸಿ ತಪ್ಪದೇ ತಮ್ಮ ಹೆಸರು, ವಾಟ್ಸಾಪ್ ಹೊಂದಿದ ಮೊಬೈಲ್ ನಂಬರನ್ನು ನೋಂದಾಯಿಸಿಕೊಳ್ಳಲು ಕೋರಿದೆ. ಖುದ್ದು ಸಹಕಾರಿಗೆ ಭೇಟಿ ನೀಡಲು ಸಾಧ್ಯವಾಗದಿದ್ದಲ್ಲಿ ನಮ್ಮ ಇ-ಮೇಲ್ societysvm@gmail.com ಗೆ ಅಥವಾ 9449677782ಗೆ SMS / ವಾಟ್ಸಾಪ್ ಮೂಲಕವೂ ಮಾಹಿತಿ ನೀಡಿ ನೋಂದಾಯಿಸಬಹುದು.

ಸೊಸೈಟಿಯ ಸದಸ್ಯರು ತಪ್ಪದೇ ಭಾಗವಹಿಸಿ ಸಹಕಾರ ನೀಡಬೇಕೆಂದು ಕೋರಿದೆ.

**ತ್ಯಾವಣಗಿ ವೀರಭದ್ರಸ್ವಾಮಿ,** ಅಧ್ಯಕ್ಷರು **ಜಿ.ಎಂ. ನಂದೀಶ್,** ಕಾರ್ಯದರ್ಶಿ

**ಜಗಳೂರು ತಾಲ್ಲೂಕಿನ ಸಮಗ್ರ ಜನತೆಗೆ ಸಿಹಿ ಸುದ್ದಿ ....**

**ನಿರ್ಮಲ ನರ್ಸಿಂಗ್ ಹೋಂ,**
ರಾಘವೇಂದ್ರ ಬಡಾವಣೆ, ದಾವಣಗೆರೆ ರಸ್ತೆ, ಜಗಳೂರು.

**ಮತ್ತು ಸಿಟಿ ಸೆಂಟ್ರಲ್ ಆಸ್ಪತ್ರೆ**
ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.

**ಇವರುಗಳು ಸಹಯೋಗದೊಂದಿಗೆ**

**'ಉಚಿತ ವೈದ್ಯಕೀಯ ತಪಾಸಣಾ ಶಿಬಿರ'**

ದಿನಾಂಕ : 13.12.2020ನೇ ಭಾನುವಾರ
ಸಮಯ : ಬೆಳಿಗ್ಗೆ 10.00 ರಿಂದ 02.00
ಮಧ್ಯಾಹ್ನ 03.00 ರಿಂದ 04.00ರವರೆಗೆ.

**ದಂತ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ಕೀಲು-ಮೂಳೆ, ಚರ್ಮರೋಗ, (ಕಣ್ಣು) ನೇತ್ರ ಚಿಕಿತ್ಸೆ, ಪ್ರಸೂತಿ ಮತ್ತು (ಬಿ.ಪಿ.) ರಕ್ತದ ಒತ್ತಡ ಪರೀಕ್ಷಿಸಲು ನುರಿತ ತಜ್ಞ ವೈದ್ಯರ ತಂಡಗಳು ಭಾಗವಹಿಸಲಿವೆ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
98441 77598, 81509 98213 ನಂಬರಿಗೆ ಕರೆ ಮಾಡಿ.

**ಐಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ,**
ಐಗೂರು, ದಾವಣಗೆರೆ ತಾ|| ಜಿ||

**ವಾರ್ಷಿಕ ಮಹಾಸಭೆಯ ನೋಟೀಸ್**

**ಸನ್ಮಾನ್ಯ ಸಂಘದ ಸದಸ್ಯರುಗಳಿಗೆ,**

ದಿನಾಂಕ : 19.12.2020ರ ಶನಿವಾರ ಬೆಳಿಗ್ಗೆ 10.30ಕ್ಕೆ ಸರಿಯಾಗಿ ನಮ್ಮ ಸಂಘದ ಕಛೇರಿಯಲ್ಲಿ ವಾರ್ಷಿಕ ಮಹಾಸಭೆಯನ್ನು ಕರೆಯಲಾಗಿದೆ. ಆದ್ದರಿಂದ ತಾವುಗಳು ಭಾಗವಹಿಸಬೇಕಾಗಿ ಈ ಮೂಲಕ ಕೋರಲಾಗಿದೆ.

1. ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ಚರ್ಚಿಸಲು 3 ದಿನಗಳಿಗೂ ಮುಂಚಿತವಾಗಿ ಅರ್ಜಿಯನ್ನು ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು.
2. ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಪರವಾಗಿ

| ಅಧ್ಯಕ್ಷರು | ಉಪಾಧ್ಯಕ್ಷರು |
|---|---|
| ಜಿ.ಎಂ. ಬಸವರಾಜು | ಬಿ.ಎಸ್. ತಿಪ್ಪೇರುದ್ರಪ್ಪ |

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

# ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರಾಗಿ ಸಚಿವ ರಮೇಶ್ ಜಾರಕಿಹೊಳಿ ಆಯ್ಕೆ



ಬೆಂಗಳೂರು, ಡಿ.9- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿಯ ಅಧ್ಯಕ್ಷರನ್ನಾಗಿ ಜಲಸಂಪನ್ಮೂಲ ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಬೆಂಗಳೂರಿನಲ್ಲಿ ಇಂದು ನಡೆದ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮತ್ತು 2ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿಯ ಅಧ್ಯಕ್ಷರಾಗಿದ್ದ ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಅವರ ಅಧ್ಯಕ್ಷತೆಯಲ್ಲಿ ನಡೆದ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಪಾಲ್ಗೊಂಡಿದ್ದ ಸಚಿವರು, ಸಂಸದರು, ಶಾಸಕರು ಒಗ್ಗಟ್ಟಿನ ಮಂತ್ರ ಪಠಿಸಿ, ಮೀಸಲಾತಿ ಹೆಚ್ಚಳ ವಿಚಾರವಾಗಿ ಸರ್ಕಾರದ ಮೇಲೆ ಒತ್ತಡ ಹಾಕಿ, ವಾಲ್ಮೀಕಿ ಜಾತ್ರೆ ವೇಳೆಗೆ ಸಿಹಿ ಸುದ್ದಿ ನೀಡುವ ಬಗ್ಗೆಯೂ ಚರ್ಚಿಸಲಾಯಿತು. ಅಲ್ಲದೇ, ವಾಲ್ಮೀಕಿ ಜಾತ್ರೆಯನ್ನು ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಅನುಸರಿಸಿ, ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.

ಸಂಸದರುಗಳಾದ ರಾಜಾ ಅಮರೇಶ ನಾಯಕ, ಅರಸೀಕೆರೆ ದೇವೇಂದ್ರಪ್ಪ, ಶಾಸಕರುಗಳಾದ ರಾಜಾವೆಂಕಟಪ್ಪ ನಾಯಕ, ಚಳ್ಳಕೆರೆ ರಘುಮೂರ್ತಿ, ಸಿರಗುಪ್ಪದ ಸೋಮಲಿಂಗಪ್ಪ, ಬಸವನಗೌಡ ದದ್ದಲ್, ನಾಗೇಂದ್ರ, ಕಂಪ್ಲಿ ಗಣೇಶ್, ಅನಿಲ್ ಚಿಕ್ಕಮಾದು, ಮಾಜಿ ಶಾಸಕರಾದ ಪ್ರತಾಪ್‌ಗೌಡ ಪಾಟೀಲ್, ಗಂಗಾಧರ್ ನಾಯಕ್, ಜಿ.ಟಿ. ಚಂದ್ರಶೇಖರಪ್ಪ, ಜೆಡಿಎಸ್ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಹೊದಿಗೆರೆ ರಮೇಶ್, ಶಾಂತಲಾ ರಾಜಣ್ಣ, ಎಂ.ಎಸ್.ಎಸ್ ನಾರಾಯಣಸ್ವಾಮಿ, ಹರ್ತಿಕೋಟೆ ವೀರೇಂದ್ರಸಿಂಹ, ಸಿರಿಗೆರೆ ತಿಪ್ಪೇಶ್ ಮತ್ತಿತರರು ಉಪಸ್ಥಿತರಿದ್ದರು.

# ಕುರುಬರು ಬೇರೆಯವರದನ್ನ ಕಿತ್ತುಕೊಳ್ಳುವವರಲ್ಲ

## ರಾಣೇಬೆನ್ನೂರಿನ ಎಸ್ಟಿ ಹೋರಾಟದ ಪೂರ್ವಭಾವಿ ಸಭೆಯಲ್ಲಿ ಶ್ರೀ ಕಾಗಿನೆಲೆ ನಿರಂಜನಾನಂದಪುರಿ ಸ್ವಾಮೀಜಿ



ರಾಣೇಬೆನ್ನೂರು, ಡಿ.8 - ಕಟ್ಟಕಡೆಯ ಕುರುಬನಿಗೂ ಸೌಲಭ್ಯ ದೊರಕಿಸಿಕೊಳ್ಳುವ ಹೋರಾಟ ನಮ್ಮದು. ಜನಸಂಖ್ಯೆಯ ಆಧಾರದ ಮೇಲಿನ ಮೀಸಲಾತಿ ಪಡೆಯುವ ಪ್ರಯತ್ನ ನಮ್ಮದು. ಬೇರೆಯವರ ಹಕ್ಕು ಕಿತ್ತುಕೊಳ್ಳುವುದಲ್ಲ. ಅಂತಹ ಜಾಯಮಾನ ಕುರುಬರದ್ದಲ್ಲ ಎಂದು ಕಾಗಿನೆಲೆ ಕನಕ ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

ರಾಣೇಬೆನ್ನೂರಿನ ಬೀರೇಶ್ವರ ಗುಡಿಯಲ್ಲಿ ನಡೆದ ಎಸ್ಟಿ ಹೋರಾಟದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಶ್ರೀಗಳು ಮಾತನಾಡುತ್ತಿದ್ದರು.

ನಮ್ಮ ಈ ಹೋರಾಟ ಇಂದಿನದಲ್ಲ. ದಶಕಗಳ ಹಿಂದಿನದ್ದು. ಅಂಬೇಡ್ಕರ್ ಅವರು ನಮಗೆ ಎಸ್ಟಿ ಸ್ಥಾನ ಕಲ್ಪಿಸಿದ್ದಾರೆ. ಅದರನ್ವಯ ನಾವು ಸೌಲಭ್ಯಗಳನ್ನು ಪಡೆಯುವ ಹೋರಾಟ ಇದಾಗಿದೆ. ಹಿಂದೆ ದೇವರಾಜ ಅರಸು ಹಾಗೂ ರಾಮಕೃಷ್ಣ ಹೆಗಡೆ ಅವರು ಈ ದಿಸೆಯಲ್ಲಿ ಕಳಿಸಿದ ಕಡತ ಕೇಂದ್ರದಿಂದ ಮರಳಿಬಂದಿವೆ. ಆಗ ನಮ್ಮದು ಗಟ್ಟಿ ಧ್ವನಿ ಇಲ್ಲದಾಗಿತ್ತು. ಈಗ ಅದಕ್ಕೆ ಯೋಗ್ಯ ಸಮಯ ಬಂದಿದೆ ಎಂದು ಸ್ವಾಮೀಜಿ ಹೇಳಿದರು.

ಶಿಕ್ಷಣ, ಕೃಷಿ, ನೌಕರಿಯಲ್ಲಿ ನಮಗೆ ಮೀಸಲಾತಿ ಬೇಕಿದೆ. ರಾಜಕೀಯದಲ್ಲಿ ಕೇವಲ ಗ್ರಾಮ ಮಟ್ಟದಲ್ಲಿ ಮಾತ್ರ ಅಲ್ಪ ಸ್ವಲ್ಪ ಮೀಸಲಾತಿ ಸಿಗುತ್ತಿದೆ. ಇದು ವಿಧಾನಸಭೆ, ಲೋಕಸಭೆ ತಲುಪುವ ಮಟ್ಟಕ್ಕೆ ಸಿಗಬೇಕಿದೆ. ಸ್ಥಳ ಕಾಯ್ದಿರಿಸಿ ನಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಕರೆಯುವಂತಾಗಬೇಕಿದೆ ಎನ್ನುವ ಹಂಬಲ ನಮ್ಮದು ಎಂದು ಸ್ವಾಮೀಜಿ ಹೇಳಿದರು.

ಇಲ್ಲಿ ಯಾರೂ ಸ್ವಾರ್ಥಿಗಳಿಲ್ಲ, ಸಮುದಾಯದ ಏಳ್ಗೆಯ ಪ್ರಯತ್ನ ನಡೆದಿದೆ. ಶ್ರೀ ಗಳ ಪ್ರಯತ್ನಕ್ಕೆ ಸಮಾಜದ ಎಲ್ಲರೂ ಕೈಜೋಡಿಸಬೇಕು. ಅವರು ಹಿಡಿದ ಕೆಲಸ ಮುಗಿಯುವವರೆಗೂ ಇಟ್ಟ ಹೆಜ್ಜೆ ಹಿಂದಕ್ಕೆ ತೆಗೆಯಲಾರರು. ಈ ಹೋರಾಟ ಇತರರ ಹೋರಾಟಕ್ಕೆ ಮಾದರಿಯಂತಾಗಬೇಕು ಎಂದು ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದ ಸ್ವಾಮೀಜಿ ಹೇಳಿದರು.

ಕೇಂದ್ರ ಸಮಿತಿಯ ಮಂಜಣ್ಣ ಮಾತನಾಡಿ, ಸೂರ್ಯ ದಿಕ್ಕು ಬದಲಿಸುವಂತೆ ಕುರುಬರ ಇಂದಿನ ಸ್ಥಿತಿ ಬದಲಾಗಲಿ ಎನ್ನುವ ಮಹದಾಸೆಯೊಂದಿಗೆ ಶ್ರೀಗಳು ಎಸ್ಟಿ ಹೋರಾಟದ ಪಾದಯಾತ್ರೆಯನ್ನು ಸಂಕ್ರಮಣ ದಿನದಿಂದ ಪ್ರಾರಂಭಿಸುವರು. ಕಾಗಿನೆಲೆಯಿಂದ ಬೆಂಗಳೂರುವರೆಗೂ ಒಂದೇ ರೀತಿಯ ವ್ಯವಸ್ಥಿತ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಶ್ರೀಗಳ ಪ್ರಯತ್ನ ಸಮಾಜದಲ್ಲಿ ಕುರುಹು ಉಳಿಸುವಂತಹದ್ದಾಗಿದೆ ಎಂದರು.

ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಸಮಾಜದ ಅಧ್ಯಕ್ಷ ಷಣ್ಮುಖಪ್ಪ, ಮೃತ್ಯುಂಜಯ ಗುದಿಗೇರ, ನಿಂಗಪ್ಪ ಗೌಡರ, ಚಂದ್ರಶೇಖರ ಕಂಬಳಿ, ಕುಬೇರಪ್ಪ ಜಿಲ್ಲಾ ಹಾಗೂ ತಾಲ್ಲೂಕು ಪದಾಧಿಕಾರಿಗಳು ಭಾಗವಹಿಸಿದ್ದರು. ಆನಂದ ಸ್ವಾಗತಿಸಿದರು.

### ಕುರುಬರ ಕುಂಯಿ...

ಕುಂಯಿ (ಕುರಿ ಕೊಯ್ದರೆ) ಅಂದರೆ ನೀವೆಲ್ಲಾ ಸೇರ್ತೀರಿ. ಧರ್ಮ, ರಾಜಕೀಯ ಮುಂತಾದ ಅನಾಚಾರಗಳಿಗೆ ಕೂಡುವ ನೀವು, ಸಮುದಾಯದ ಏಳ್ಗೆಯ ಈ ಕಾರ್ಯದಲ್ಲಿ ಭಾಗವಹಿಸಿರಿ. ಅರ್ಧ ಕೆಜಿ ಅಡಿಕೆ, ಸಿವುಡು ಎಲೆಯೊಂದಿಗೆ ಕಾಟಾಚಾರಕ್ಕೆ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವದು ಬೇಡ. ನಿಮ್ಮ ಮಕ್ಕಳು, ಮೊಮ್ಮಕ್ಕಳ ಭವಿಷ್ಯದ ಬದಲಾವಣೆಗೆ ಈ ಪಾದಯಾತ್ರೆ ಯಶಸ್ಸು ಗಳಿಸಲು ಒಂದಾಗಿ ಶ್ರಮಿಸುವ. ಫೆಬ್ರವರಿ ತಿಂಗಳಿನ ನಮ್ಮ ಧ್ವನಿ ದಿಲ್ಲಿಗೆ ಕೇಳಿಸುವಂತಾಗಬೇಕು ಎಂದು ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

# ಬಂದ್ ರಾಜಕೀಯ ಪ್ರೇರಿತ



ದಾವಣಗೆರೆ, ಡಿ.9- ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರೈತಪರ ನಿಲುವು ಹೊಂದಿದ್ದರೂ, ರೈತ ಸಂಘಟನೆಗಳು ಕರೆ ನೀಡಿರುವ ಭಾರತ್ ಬಂದ್ ರಾಜಕೀಯ ಪ್ರೇರಿತವಾಗಿದ್ದು, ಇದರ ಹಿಂದೆ ಕಾಂಗ್ರೆಸ್ ಸೇರಿದಂತೆ, ಇತರೆ ವಿಪಕ್ಷಗಳ ಕೈವಾಡ ಇರುವುದಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ ಆರೋಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಕೃಷಿ ಕ್ಷೇತ್ರದ ಸುಧಾರಣೆಗಾಗಿ ರೈತರ ಉತ್ಪನ್ನ, ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಮಸೂದೆ, ರೈತರ ಬೆಳೆಗಳಿಗೆ ಬೆಲೆ ಭರವಸೆ ಮತ್ತು ಸೇವಾ ಒಪ್ಪಂದ (ಕಲ್ಯಾಣ ಮತ್ತು ಸೌಲಭ್ಯ) ಮಸೂದೆ, ಅಗತ್ಯ ಸರಕುಗಳ (ತಿದ್ದುಪಡಿ) ಮಸೂದೆ ಜಾರಿಗೆ ತಂದಿದ್ದು, ಇದರಿಂದ ಯಾವುದೇ ರೈತರಿಗೆ ತೊಂದರೆ ಆಗುವುದಿಲ್ಲ. ಆದರೆ, ಬಿಜೆಪಿಯ ಸರಣಿ ಗೆಲುವಿನಿಂದ ಹತಾಶೆಗೊಂಡಿರುವ ಕಾಂಗ್ರೆಸ್ ಮತ್ತು ಇತರೆ ವಿರೋಧ ಪಕ್ಷಗಳು ರೈತರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟುತ್ತಿವೆ ಎಂದು ಪತ್ರಿಕಾಗೋಷ್ಠಿಯಲ್ಲಿ ಆಪಾದಿಸಿದರು.

ಕೇಂದ್ರ ಸರ್ಕಾರದ ರೈತಪರ ಕಾಯ್ದೆಗಳಿಂದ ತಮ್ಮ ವ್ಯಾಪಾರ, ವಹಿವಾಟು ಕಳೆದುಕೊಳ್ಳುವ ಭೀತಿಯಲ್ಲಿರುವ ಪಂಜಾಬ್‌ನ ದಲ್ಲಾಳಿಗಳು ಮತ್ತು ಮಧ್ಯವರ್ತಿಗಳು ರೈತರ ಮುಖವಾಡ ಧರಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಇವರ ಕುಮ್ಮಕ್ಕಿನಿಂದ ರೈತ ಸಂಘಟನೆಗಳು ಭಾರತ್ ಬಂದ್ ಗೆ ಕರೆ ನೀಡಿವೆ. ಇದರಲ್ಲಿ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಕಾಂಗ್ರೆಸ್, ಎಎಪಿ, ಕಮ್ಯುನಿಸ್ಟ್ ಸೇರಿದಂತೆ ಇತರೆ ಪಕ್ಷಗಳು ಈ ಬಂದ್‌ಗೆ ಬೆಂಬಲ ನೀಡಿವೆಯೇ ಹೊರತು, ನಿಜವಾದ ರೈತ ಬಂದ್ ಬೆಂಬಲಿಸಿಲ್ಲ ಎಂದು ಹೇಳಿದರು.

ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಯೂರಿಯಾ ಅಭಾವ ನೀಗಿಸಲು ಬೇವು ಲೇಪಿತ ಯೂರಿಯಾ, ಈ ವರೆಗೂ ಕತ್ತಲೆಯಲ್ಲಿದ್ದ 18 ಸಾವಿರ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ, ಬಿತ್ತನೆ ಬೀಜದಿಂದ ಮಾರುಕಟ್ಟೆವರೆಗೆ ಹಲವು ಸುಧಾರಣಾ ಕ್ರಮ, ಕಿಸಾನ್ ಕಾರ್ಡ್ ವಿತರಣೆ, ಮಣ್ಣಿನ ಫಲವತ್ತತೆ ತಿಳಿಯಲು ಸಾಯಿಲ್ ಹೆಲ್ತ್ ಕಾರ್ಡ್, ಬೆಳೆ ನಷ್ಟ ಸರಿದೂಗಿಸಲು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ, ಕಿಸಾನ್ ಸಮ್ಮಾನ್ ಸೇರಿದಂತೆ ಹಲವು ರೈತಪರ ಯೋಜನೆಗಳನ್ನು ಮೋದಿ ಸರ್ಕಾರ ಜಾರಿಗೊಳಿಸಿದ್ದರೂ ವಿಪಕ್ಷಗಳು ಸರ್ಕಾರದ ವಿರುದ್ಧ ರೈತರನ್ನು ಎತ್ತಿ ಕಟ್ಟಿ ದಾರಿ ತಪ್ಪಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗರಾಜ್ ಲೋಕಿಕೆರೆ, ಜಿಲ್ಲಾ ವಕ್ತಾರ ಡಿ.ಎಸ್.ಶಿವಶಂಕರ್, ಬಿಜೆಪಿ ಕಾರ್ಯದರ್ಶಿ ಬಿ.ಎಸ್.ಜಗದೀಶ್, ಮುಖಂಡರಾದ ಮಂಜಾ ನಾಯ್ಕ, ವಿಶ್ವಾಸ್ ಸೇರಿದಂತೆ ಇತರರು ಇದ್ದರು.

# ಸಾಯಿ ಮಂದಿರದಲ್ಲಿ ಇಂದು ಕಾರ್ತಿಕ



ನಗರದ ಎಂ.ಸಿ.ಸಿ. ಎ ಬ್ಲಾಕ್ ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಇಂದು ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

# ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಶರದ್ ಬೊಬ್ಡೆ ತಾಯಿಗೆ 2.5 ಕೋಟಿ ವಂಚನೆ

ನಾಗಪುರ, ಡಿ. 9 – ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಶರದ್ ಅರವಿಂದ ಬೊಬ್ಡೆ ಅವರ ತಾಯಿಗೆ ಕೌಟುಂಬಿಕ ಆಸ್ತಿ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ವ್ಯಕ್ತಿಯಿಂದ 2.5 ಕೋಟಿ ರೂ.ಗಳ ಮೋಸವಾಗಿದೆ ಎಂಬ ದೂರು ದಾಖಲಾಗಿರುವುದಾಗಿ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತಪಸ್ ಘೋಷ್ ಎಂಬಾತನನ್ನು ಪೊಲೀಸರು ನಿನ್ನೆ ಬಂಧಿಸಿದ್ದಾರೆ. ಡಿಸಿಪಿ ವಿನಿತಾ ಸಾಹು ಅವರ ಉಸ್ತುವಾರಿಯಲ್ಲಿ ನಾಗಪುರ ಪೊಲೀಸರ ವಿಶೇಷ ತನಿಖಾ ತಂಡ ಈ ಬಗ್ಗೆ ವಿಚಾರಣೆ ನಡೆಸುತ್ತಿದೆ.

ಬೊಬ್ಡೆ ಕುಟುಂಬ ಆಕಾಶವಾಣಿ ಸ್ಕ್ವೇರ್ ಬಳಿ 'ಸೀಡನ್ ಲಾನ್' ಎಂಬ ಆಸ್ತಿಯ ಒಡೆತನ ಹೊಂದಿದೆ. ಇದನ್ನು ಹಲವಾರು ಸಮಾರಂಭಗಳಿಗೆ ಬಾಡಿಗೆಯ ಮೇಲೆ ನೀಡಲಾಗುತ್ತಿತ್ತು. ಸಿಜೆಐ ಅವರ ತಾಯಿ ಮುಕ್ತಾ ಬೊಬ್ಡೆ ಅವರು ಆಸ್ತಿಯ ಮಾಲೀಕರಾಗಿದ್ದಾರೆ. ಕುಟುಂಬದವರು ಘೋಷ್ ಎಂಬ ವ್ಯಕ್ತಿಯನ್ನು ಉಸ್ತುವಾರಿಗೆ ನೇಮಿಸಿದ್ದರು.

ಘೋಷ್ ಕಳೆದ ಹತ್ತು ವರ್ಷಗಳಿಂದ ಈ ಆಸ್ತಿ ಹಾಗೂ ಅದರ ಹಣಕಾಸು ವಿಚಾರಗಳನ್ನು ನೋಡಿಕೊಳ್ಳುತ್ತಿದ್ದ. ವೃದ್ಧೆಯಾದ ಮುಕ್ತಾ ಬೊಬ್ಡೆ ಅವರ ಅನಾರೋಗ್ಯದ ದುರ್ಲಾಭ ಪಡೆದ ಘೋಷ್, ಆಸ್ತಿಯ ನಕಲಿ ರಸೀದಿಗಳನ್ನು ಸೃಷ್ಟಿಸಿ 2.5 ಕೋಟಿ ರೂ.ಗಳ ವಂಚನೆ ಮಾಡಿದ್ದಾನೆ. ಈತ ಇನ್ನಷ್ಟು ವಂಚನೆ ಮಾಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

# ಜಪಾನ್‌ನಲ್ಲಿ ತೀವ್ರವಾದ ಹಕ್ಕಿಜ್ವರ

ಟೋಕಿಯೋ, ಡಿ. 9 – ಜಪಾನ್‌ನಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ ಇರುವ ಪೌಲ್ಟ್ರಿ ಫಾರಂಗಳು ಎಚ್ಚರಿಕೆ ವಹಿಸಬೇಕೆಂದು ತಿಳಿಸಲಾಗಿದೆ. ಸಾಮಾನ್ಯ ವರ್ಷಗಳಿಗಿಂತ ಈ ಬಾರಿ ಹಕ್ಕಿ ಜ್ವರದ ಸೋಂಕು ತೀವ್ರವಾಗಿದೆ ಎಂದು ಜಪಾನ್ ಸರ್ಕಾರದ ಪ್ರಧಾನ ವಕ್ತಾರ ಕಟ್ಸುನೊಬು ಕ್ಯಾಟೋ ಹೇಳಿದ್ದಾರೆ. ಜಪಾನ್ ಕಳೆದ 4 ವರ್ಷಗಳಲ್ಲಿ ತೀವ್ರವಾದ ಹಕ್ಕಿ ಜ್ವರ ಸೋಂಕು ಎದುರಿಸುತ್ತಿದೆ. ಯುರೋಪ್‌ನಲ್ಲೂ ಹಕ್ಕಿ ಜ್ವರ ವೇಗವಾಗಿ ಹರಡುತ್ತಿದೆ.


## ರಜಾ ಸೂಚನೆ

**ಮೆ|| ಪಾಂಡುರಂಗ ಬೋಮಯ್ಯ ವೆರ್ಣೇಕರ್**

ಮದುವೆಯ ಪ್ರಯುಕ್ತ

ದಿನಾಂಕ 10.12.2020ರ ಗುರುವಾರ

ಈ ಕೆಳಕಂಡ ನಮ್ಮ ಎಲ್ಲಾ ಅಂಗಡಿಗಳು ರಜೆ ಇರುತ್ತವೆ.

ಮಾನ್ಯ ನಮ್ಮೆಲ್ಲಾ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.

- ಮೆ|| ಪಾಂಡುರಂಗ ಬೋಮ್ಮಯ್ಯ ವೆರ್ಣೇಕರ್ ಜ್ಯೂಯಲರ್ಸ್, (ದೊಡ್ಡಪೇಟೆ)
- ಮೆ|| ಪಾಂಡುರಂಗ ಬೋಮ್ಮಯ್ಯ ವೆರ್ಣೇಕರ್ ಜ್ಯೂಯಲರ್ಸ್, (ಮಂಡಿಪೇಟೆ)
- ಶ್ರೀ ಗುರು ಮಹಾರಾಜ ಜ್ಯೂಯಲರಿ ಮಾರ್ಟ್, (ಮಂಡಿಪೇಟೆ)
- ಶ್ರೀ ಚೈತನ್ಯ ಜ್ಯೂಯಲರಿ ಮಾರ್ಟ್, (ಚಾಮರಾಜಪೇಟೆ)
- ಶ್ರೀ ಸದ್ಗುರು ಜ್ಯೂಯಲರ್ಸ್, (ಮಂಡಿಪೇಟೆ)
- ಶ್ರೀ ಮಾಳ್ಗಸ ಜ್ಯೂಯಲರ್ಸ್, (ಮಂಡಿಪೇಟೆ)
- ಶ್ರೀ ಸರಸ್ವತಿ ಪಾಂಡುರಂಗ ವೆರ್ಣೇಕರ್ ಜ್ಯೂಯಲರ್ಸ್, (ಮಂಡಿಪೇಟೆ), ದಾವಣಗೆರೆ








## ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,

# 165/1-2, ಶ್ರೀ ವಾಸವಿ ರಸ್ತೆ, 3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-577 002.

**ಬ್ಯಾಂಕಿನ 54ನೇ ವಾರ್ಷಿಕ ಸಾಮಾನ್ಯ ಮಹಾಸಭೆಗೆ ವಿಡಿಯೋ ಕಾನ್ಫರೆನ್ಸ್ (ವರ್ಚುಯಲ್ ಮೀಟಿಂಗ್) ಮೂಲಕ ಹಾಜರಾಗುವುದರ ಬಗ್ಗೆ**



ಆರ್.ಜಿ. ಶ್ರೀನಿವಾಸಮೂರ್ತಿ
ಅಧ್ಯಕ್ಷರು



ಆರ್.ಎಲ್.ಪ್ರಭಾಕರ್ ನಿರ್ದೇಶಕರು, ಕಾಸಲ್ ಎಸ್.ಸತೀಶ್ ನಿರ್ದೇಶಕರು, ಎನ್.ಕಾಶೀನಾಥ್ ನಿರ್ದೇಶಕರು, ಕೆ.ಎನ್.ಅನಂತರಾಮಶೆಟ್ಟಿ ನಿರ್ದೇಶಕರು, ಎ.ಎಸ್.ಸತ್ಯನಾರಾಯಣ ಸ್ವಾಮಿ ನಿರ್ದೇಶಕರು, ಕೆ.ವಿ.ಮಂಜುನಾಥ್ ನಿರ್ದೇಶಕರು, ಜೆ.ರವೀಂದ್ರಗುಪ್ತ ನಿರ್ದೇಶಕರು, ವೈ.ಬಿ.ಸತೀಶ್ ನಿರ್ದೇಶಕರು, ಐ.ಎಸ್.ಶಿವಾನಂದ ನಿರ್ದೇಶಕರು, ಐ.ಎಸ್.ರಾಘವೇಂದ್ರ ಶೆಟ್ಟಿ ನಿರ್ದೇಶಕರು, ಶ್ರೀಮತಿ ಕೆ.ಎಂ.ಗೀತಾರಾವ್ ಮಹಿಳಾ ನಿರ್ದೇಶಕರು, ನಾಗರಾಜ ಶೆಟ್ಟಿ ಆರ್ ವೃತ್ತಿ ಪರ ನಿರ್ದೇಶಕರು, ಕಿ.ಎಂ.ಜಿ.ಶ್ರೀಧರ್ ವೃತ್ತಿ ಪರ ನಿರ್ದೇಶಕರು, ಪಡಗಲ್ ಪ್ರಶಾಂತ್ ಪ್ರಧಾನ ವ್ಯವಸ್ಥಾಪಕರು, ಭೀಮಾನಂದ ಶೆಟ್ಟಿ ಸಹಾಯಕ ಪ್ರಧಾನ ವ್ಯವಸ್ಥಾಪಕರು



ಶ್ರೀಮತಿ ಆರ್.ಎಸ್. ಸುಜಾತಾ
ಉಪಾಧ್ಯಕ್ಷರು

'ಕೋವಿಡ್-19'ರ ವೈರಾಣು ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದ ಸಂಖ್ಯೆ ಸಇ 43 ಸಿ.ಎಲ್.ಎಂ. 2020 (ಇ), ಬೆಂಗಳೂರು, **ದಿನಾಂಕ 21.10.2020ರ ಅನ್ವಯ ಸದಸ್ಯರ ಸುರಕ್ಷತೆ ಮತ್ತು ಹಿತದೃಷ್ಟಿಯಿಂದ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇರೆಗೆ, ದಿನಾಂಕ 12.12.2020ರ ಶನಿವಾರ ಸಂಜೆ 5.30 ಕ್ಕೆ 54ನೇ ವಾರ್ಷಿಕ ಮಹಾಸಭೆಯನ್ನು ವಿಡಿಯೋ ಕಾನ್ಫರೆನ್ಸ್ (ವರ್ಚುಯಲ್ ಮೀಟಿಂಗ್)** ಮೂಲಕ ನಡೆಸಲು ತೀರ್ಮಾನ ಕೈಗೊಂಡಿರುವುದರಿಂದ ಮಾನ್ಯ ಸದಸ್ಯ ಬಾಂಧವರು ತಮ್ಮ ಮೊಬೈಲ್‌ನಲ್ಲಿ **zoom App**ನ್ನು ಅಳವಡಿಸಿಕೊಂಡು ಬ್ಯಾಂಕಿನಿಂದ ತಮ್ಮ ಮೊಬೈಲ್‌ಗೆ ಎಸ್.ಎಂ.ಎಸ್. ಮೂಲಕ ಕಳುಹಿಸುವ ಲಿಂಕ್ **https://zoom.us/j/99519001216** ನ್ನು ಒತ್ತುವ ಮೂಲಕ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ (ವರ್ಚ್ಯುಯಲ್ ಮೀಟಿಂಗ್) ಮೂಲಕ ಭಾಗವಹಿಸಲು ವಿನಂತಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಕಲಂ 27ಎ ರ ಅನ್ವಯ 5 ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಸದಸ್ಯರು 3 ವಾರ್ಷಿಕ ಮಹಾಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ಈ ಲಿಂಕ್ ಮೂಲಕ ತಾವುಗಳು ಮಹಾಸಭೆಗೆ ಹಾಜರಾದಲ್ಲಿ ವಾರ್ಷಿಕ ಮಹಾಸಭೆಗೆ ಹಾಜರಾದಂತೆ ಪರಿಗಣಿಸಲಾಗುವುದು.

ಎಲ್ಲಾ ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಜಾರಿ ಮಾಡಲಾಗಿದೆ ಹಾಗೂ ವಿಷಯ ಸೂಚಿಯನ್ನು ಕ್ರಮವಾಗಿ ದಿನಾಂಕ 09.11.2020 ಮತ್ತು 10.11.2020 ರಂದು ನಗರವಾಣಿ ಮತ್ತು ಜನತಾವಾಣಿ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ. ಮಾನ್ಯ ಸದಸ್ಯ ಬಾಂಧವರಿಗೆ ವಾರ್ಷಿಕ ಮಹಾಸಭೆಯ ಪುಸ್ತಕವು ಸ್ವೀಕೃತಿಯಾಗದೇ ಇದ್ದಲ್ಲಿ ಈ ಪ್ರಕಟಣೆಯೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ.

ದಿನಾಂಕ : 06-12-2020
ದಾವಣಗೆರೆ

**ಸೂಚನೆ : 54 ನೇ ವಾರ್ಷಿಕ ಮಹಾಸಭೆ ಅಂಗವಾಗಿ ಮಾನ್ಯ ಸದಸ್ಯರು ದಿನಾಂಕ 21-12-2020 ರಿಂದ 26-12-2020 ರ ಒಳಗೆ ಬ್ಯಾಂಕಿನಲ್ಲಿ ಗುರುತಿನ ಚೀಟಿ ತೋರಿಸಿ ಸ್ವೀಟ್‌ಬಾಕ್ಸ್‌ನ್ನು ಪಡೆಯಲು ಕೋರಿದೆ.**

ಆಡಳಿತ ಮಂಡಳಿ ಪರವಾಗಿ
ಆರ್.ಜಿ. ಶ್ರೀನಿವಾಸಮೂರ್ತಿ
ಅಧ್ಯಕ್ಷರು


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte